
ದೆಹಲಿ ಕರ್ನಾಟಕ ಸಂಘದ

# ಅಭಿಮತ


ಅಕ್ಟೋಬರ್ 2022
ಬೆಲೆ ರೂ. 1

































**ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ಕನ್ನಡ ಕುಲಕೋಟಿಯ ಕರುಳು ಬಳ್ಳಿಯ ಸಂಬಂಧವನ್ನು ನೀರೆರೆದು ಪೋಷಿಸುತ್ತಾ ಬರುತ್ತಿರುವ ಅಭಿಮತಕ್ಕೀಗ ೩೩ರ ಹರೆಯ**



ದೆಹಲಿಯ ಪ್ರತಿಷ್ಠಿತ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏಮ್ಸ್) ಯ ನೂತನ ನಿರ್ದೇಶಕರಾಗಿ ನೇಮಕಗೊಂಡ ಕನ್ನಡದ ಹೆಮ್ಮೆಯ ಪುತ್ರ ಡಾ. ಎಂ. ಶ್ರೀನಿವಾಸ್ ಅವರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಕಾರ್ಯಕಾರಿ ಸದಸ್ಯರುಗಳಾದ ಶ್ರೀ ಕೆ.ಎಸ್.ಮೂರ್ತಿ, ಶ್ರೀ ಚಂದ್ರಶೇಖರ ಎನ್.ಪಿ. ಮತ್ತು ಶ್ರೀ ಸಂತೋಷ ಜೆ ಅವರು ದಿನಾಂಕ 02.10.2022 ರಂದು ಭೇಟಿ ಮಾಡಿದ ಸಂದರ್ಭದಲ್ಲಿ ಪುಷ್ಪಗುಚ್ಛ ನೀಡಿ ಗೌರವಿಸಿ ಅಭಿನಂದಿಸಲಾಯಿತು.




ದೆಹಲಿ ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಘಟಕದ ಉದ್ಘಾಟನೆ ಸಮಾರಂಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಿರುವುದು


**DELHI KARNATAKA SANGHA** Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

ಅಭಿಮತ
ಸಂಪುಟ 33 | ಸಂಚಿಕೆ 1
ಅಕ್ಟೋಬರ್ 2022

ಅಭಿಮತ ಸಂಪಾದಕ ಮಂಡಳಿ

ಪ್ರಧಾನ ಸಂಪಾದಕ
ಚಂದ್ರಶೇಖರ ಎನ್.ಪಿ.

ಸಂಪಾದಕ ಮಂಡಳಿ ಸದಸ್ಯರು
ಕೆ.ಎಸ್. ಮೂರ್ತಿ
ಅಮರೇಶ ದೊಡಮನಿ
ಯಲ್ಲಾಲಿಂಗ ಕೊಪ್ಪದ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಸಿ.ಎಂ. ನಾಗರಾಜ

ಉಪಾಧ್ಯಕ್ಷರು
ಡಾ. ಎಂ.ಎಸ್. ಶಶಿ ಕುಮಾರ್
ಪೂಜಾ ಪಿ. ರಾವ್

ಪ್ರಧಾನ ಕಾರ್ಯದರ್ಶಿ
ಆರ್. ರೇಣುಕುಮಾರ್

ಕೋಶಾಧಿಕಾರಿ
ರಾಧಾಕೃಷ್ಣ

ಜಂಟಿ ಕಾರ್ಯದರ್ಶಿಗಳು
ಬಿ. ನಾರಾಯಣ
ಸುಮಿತಾ ಮುರಗೋಡ

ಸಮಿತಿ ಸದಸ್ಯರು
ಪ್ರಭಾಕರ ಮಡ್ಡಿತೋಟ್
ಶಿವಪ್ಪ ಎಂ
ಎ.ಟಿ. ಶ್ರೀನಿವಾಸ
ಮಾಲಿನಿ ಪ್ರಹ್ಲಾದ್
ಕೆ.ಎಸ್. ಮೂರ್ತಿ
ನವೀನ್ ಕುಮಾರ್ ವಿ.
ಸವಿತಾ ನೆಲ್ಲಿ
ಅಶ್ವಿನಿ ಬಿ.ಎಸ್.
ಸಂತೋಷ ಜೆ
ಚಂದ್ರಶೇಖರ ಎನ್.ಪಿ.

ಕಾವಲು ಸಮಿತಿ
ಅನಂತರಾಮ ಅರಳ
ಡಿ.ವಿ.ಎಸ್. ಮೂರ್ತಿ
ಈಶ್ವರ ಮಡಿವಾಳ

## ಸಂಪಾದಕೀಯ

# ಅಭಿಮತವನ್ನು ಅಕ್ಕರೆಯಿಂದ ಆಶೀರ್ವದಿಸುತ್ತ ಬರುತ್ತಿರುವ ಅಕ್ಷರ ಪ್ರೇಮಿಗಳಿಗೆ ಆಭಾರ ಮನ್ನಣೆಗಳು

**ಓದುಗ ಬಂಧುಗಳೇ ನಮಸ್ಕಾರ, ಎಲ್ಲರಿಗೂ ನಾಡಹಬ್ಬ ದಸರಾ ಹಾಗೂ ವಿಜಯದಶಮಿಯ ಹಾರ್ದಿಕ ಶುಭಾಶಯಗಳು.** ಅಮೃತ ಮಹೋತ್ಸವ ಸಂಭ್ರಮಾಚರಣೆಯಲ್ಲಿರುವ ದೆಹಲಿ ಕರ್ನಾಟಕ ಸಂಘದ ಮುಖವಾಣಿ ಅಭಿಮತ ಇದೀಗ ಮೂವತ್ತಮೂರರ ಹರೆಯಕ್ಕೆ ಕಾಲಿಟ್ಟಿದೆ. ಆರಂಭದಿಂದಲೂ ಸಂಘದ ಸಾಧನೆ, ಶ್ರೇಯ, ಕೀರ್ತಿ ಪತಾಕೆಗಳ ಜೊತೆಗೆ ದೆಹಲಿ ಹಾಗೂ ಎನ್.ಸಿ.ಆರ್. ನಲ್ಲಿನ ಕನ್ನಡ, ಕನ್ನಡಿಗ, ಕರ್ನಾಟಕಕ್ಕೆ ಸಂಬಂಧಿತ ಕಾರ್ಯ ಚಟುವಟಿಕೆಗಳನ್ನು ಸಂಘದ ಆಜೀವ ಸದಸ್ಯರಿಗೆ ತಲುಪಿಸುತ್ತ ಸಂಘ ಹಾಗೂ ಆಜೀವ ಸದಸ್ಯರ ನಡುವೆ ಒಂದು ಅವಿನಾಭಾವ ಸಂಬಂಧವನ್ನು ಬೆಸೆದಿರುವ ಅಭಿಮತವು ಇತ್ತೀಚಿನ ವರ್ಷಗಳಲ್ಲಿ ವ್ಯಾಟ್ಸ್‌ಆಪ್, ಫೇಸ್‌ಬುಕ್ ಸೇರಿದಂತೆ ಇನ್ನಿತರ ವಿಧಾನಗಳ ಮೂಲಕ ಜಗತ್ತಿನ ಎಲ್ಲೆಡೆ ಇರುವ ಕನ್ನಡಿಗರಿಗೆ ಮುಟ್ಟಿಸುತ್ತಾ ದೆಹಲಿಯ ಕರ್ನಾಟಕ ಸಂಘ ಹಾಗೂ ಸಮಸ್ತ ಕನ್ನಡ ಕುಲಕೋಟಿಯ ನಡುವೆ ಕರುಳು ಬಳ್ಳಿಯ ಸಂಬಂಧವನ್ನು ಬೆಳೆಸಲು ನೀರೆರೆದು ಪೋಷಿಸುತ್ತಾ ಬರುತ್ತಿದೆ ಎನ್ನುವುದು ಅಭಿಮಾನದ ಸಂಗತಿ.

ಕನ್ನಡ ನಾಡು, ನುಡಿ, ಸಂಸ್ಕೃತಿಯ ಸಂರಕ್ಷಣೆ, ಸಂವರ್ಧನೆಗಾಗಿ ರಾಷ್ಟ್ರ ರಾಜಧಾನಿಯಲ್ಲಿ ಟೊಂಕ ಕಟ್ಟಿ ನಿಂತಿರುವ ನಮ್ಮ ದೆಹಲಿ ಕರ್ನಾಟಕ ಸಂಘವು ಹೊರನಾಡಿನಲ್ಲಿ ಮಾತ್ರವಲ್ಲದೇ ಕನ್ನಡ ನಾಡಿನ ಒಳಗಿರುವ ನಮ್ಮ ಕನ್ನಡಿಗರಿಗೂ ಸ್ಪೂರ್ತಿಯಾಗಬಲ್ಲ ಪ್ರಶಸ್ತಿ, ಗೌರವ ಪುರಸ್ಕಾರಗಳನ್ನು ಸ್ಥಾಪಿಸಿದ್ದು ಮಾತ್ರವಲ್ಲದೇ, ನಿರಂತರವಾಗಿ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಹೊರನಾಡಿನ ಹೊಸ ಪೀಳಿಗೆಯ ಕನ್ನಡ ಕುಡಿಗಳಲ್ಲಿ ಕನ್ನಡತನವನ್ನು ಬಡಿದೆಬ್ಬಿಸಬಲ್ಲ ಕನ್ನಡದ ಕಾರ್ಯಕ್ರಮಗಳನ್ನು ನೀಡುತ್ತಾ ಬರುತ್ತಿದೆ. ಇವೆಲ್ಲವುಗಳನ್ನು ಜಗತ್ತಿನೆಲ್ಲೆಡೆ ಇರುವ ಕನ್ನಡಿಗರಿಗೆ ತಲುಪಿಸುವ ಸಂಪರ್ಕ ಸೇತುವಾಗಿರುವ ಅಭಿಮತ ಪತ್ರಿಕೆ 2ನೇ ಅಕ್ಟೋಬರ್ 1990ರ ಗಾಂಧಿ ಜಯಂತಿಯಂದು ಪ್ರಾರಂಭವಾಯಿತು. ಅಂದು ಶ್ರೀ ಎನ್.ಪಿ. ಭಟ್ ಅವರ ಅಧ್ಯಕ್ಷತೆಯ ಕಾರ್ಯಕಾರಿ ಸಮಿತಿಯ ಮಹತ್ವದ ನಿರ್ಧಾರದಂತೆ ಪ್ರಾರಂಭಗೊಂಡ ಅಭಿಮತ ಪತ್ರಿಕೆಯ ಮೊಟ್ಟಮೊದಲ ಸಂಪಾದಕರಾಗಿ ಡಾ. ವೆಂಕಟಾಚಲ ಜಿ. ಹೆಗಡೆ ಸುಮಾರು ಒಂದೂವರೆ ದಶಕಗಳ ಕಾಲ ಅತ್ಯಂತ ಮುತುವರ್ಜಿಯಿಂದ ಮುನ್ನಡೆಸಿದರು. ಕನ್ನಡದಲ್ಲಿ ಮುದ್ರಣ ತಂತ್ರಜ್ಞಾನದ ಕುಡಿಯೊಡೆಯುತ್ತಿದ್ದ ಕಾಲಘಟ್ಟದಲ್ಲಿ ಅಸ್ತಿತ್ವಕ್ಕೆ ಬಂದ ಅಭಿಮತಕ್ಕೆ ಆಗ ಇದ್ದ ಸವಾಲುಗಳನ್ನು ಮೆಟ್ಟಿ ನಿಂತು ಗಟ್ಟಿ ಅಸ್ತಿತ್ವ ಪಡೆದ ಪತ್ರಿಕೆಯು ಅನಂತರದ ದಶಕಗಳಲ್ಲಿ ತನ್ನ ಕಪ್ಪು ಬಿಳುಪು ರೂಪವನ್ನು ವರ್ಣಮಯಗೊಳಿಸಿಕೊಂಡಿದ್ದಲ್ಲದೆ ತನ್ನ ಪುಟಗಳ ಸಂಖ್ಯೆ, ವರದಿ, ಲೇಖನ, ಕಥೆ, ಕವನ, ಪುಸ್ತಕ ವಿಮರ್ಶೆ, ಓದುಗರ ಅನಿಸಿಕೆ ಇತ್ಯಾದಿಯಾಗಿ ಬರಹಗಳನ್ನು ವೃದ್ಧಿಸಿಕೊಳ್ಳುತ್ತಾ, ದೆಹಲಿಯ ಸ್ಥಳೀಯ ಹಾಗೂ ಎನ್.ಸಿ.ಆರ್. ಪ್ರದೇಶಗಳಾದ ಗುರುಗಾಂವ್, ಭಿವಾಡಿ, ನೋಯ್ಡಾಗಳಲ್ಲಿನ ಕನ್ನಡ ಸಂಘ ಸಂಸ್ಥೆಗಳಿಗೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಎಲ್ಲಾ ಓದುಗರ ಮನಗೆಲ್ಲುತ್ತಾ ಬಂದಿದೆ.

ಆರಂಭಿಕ ಅಡಚಣೆಗಳು ಒಂದು ಬಗೆಯವಾದರೇ, ನಂತರದ ಸುಮಾರು ಎರಡು ದಶಕಗಳಲ್ಲಿ ದೇಶದಲ್ಲಿ ಆದ ತಂತ್ರಜ್ಞಾನ ಕ್ಷೇತ್ರದ ಪ್ರಗತಿಯಿಂದಾಗಿ ಇಡೀ ಜಗತ್ತಿನ ವಿದ್ಯಮಾನಗಳನ್ನು ಗಮನಿಸಿದಾಗ ಸಾಹಿತ್ಯ ಕೃತಿಗಳು, ಪತ್ರಿಕೆಗಳು ಓದುಗರ ಕೊರತೆಯನ್ನು ಎದುರಿಸಬೇಕಾಗಿ ಬಂದಿರುವುದು ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಹೀಗಿದ್ದಾಗ್ಯೂ ಎದುರಾಗುತ್ತಿರುವ ಎಲ್ಲ ಸವಾಲುಗಳನ್ನು ಮೆಟ್ಟಿ ನಿಂತು ನಮ್ಮ ಅಕ್ಕರೆಯ ಅಭಿಮತವನ್ನು ಈ ಎತ್ತರಕ್ಕೆ ಬೆಳೆಸುವಲ್ಲಿ ಶ್ರಮಿಸಿದವರು ಅನೇಕರು. ಮುಖ್ಯವಾಗಿ ಶ್ರೀಮತಿ ಉಷಾ ಭರತಾದ್ರಿ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಶ್ರೀ ಬಾಲಕೃಷ್ಣ ನಾಯ್ಕ್ ಡಿ., ಡಾ. ಅವನಿಂದ್ರನಾಥ ರಾವ್ ಅವರೂ ಸೇರಿದಂತೆ ಹತ್ತಾರು ಹಿರಿಯರು, ಬುದ್ಧಿಜೀವಿಗಳು ಅಭಿಮತಕ್ಕೆ ತಮ್ಮ ಶ್ರಮ, ಪ್ರತಿಭೆ ಮತ್ತು ಸಮಯಗಳನ್ನು ನೀಡಿ ಪೋಷಿಸಿದ್ದಾರೆ. ಆ ಎಲ್ಲ ಮಹನೀಯರಿಗೂ ಸಮಸ್ತ ಓದುಗರ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇನೆ. ಈ ಹಿಂದಿನ ಎಲ್ಲಾ ಹಿರಿಯರು ಹಾಕಿ ಕೊಟ್ಟಿರುವ ದಾರಿಯಲ್ಲಿ ಮುನ್ನಡೆಯುತ್ತಾ, ತನ್ನ ಗುಣಮಟ್ಟವನ್ನು ಕಾಪಾಡಿಕೊಂಡು ಬರಲು ಮೂಲ ಪ್ರೇರಣೆಯೇ ನಮ್ಮ ಪ್ರೀತಿಯ ಅಭಿಮತದ ಸಮಸ್ತ ಓದುಗ ಬಂಧುಗಳು. ಆ ಎಲ್ಲ ನನ್ನ ಅಕ್ಷರ ಪ್ರೇಮಿಗಳಿಗೆ ನನ್ನ ಅಭಾರ ಮನ್ನಣೆಗಳು. ಹಾಗೆಯೇ, ನಮ್ಮ ಈ ಕನ್ನಡದ ಕಾಯಕದಲ್ಲಿ ಕ್ರಿಯಾಸರೆಯಾಗಿರುವ ಪ್ರಸ್ತುತ ದೆಹಲಿ ಕರ್ನಾಟಕ ಸಂಘದ ಅಧಕ್ಷರಾಗಿರುವ ಶ್ರೀ ಸಿ.ಎಂ. ನಾಗರಾಜ ಅವರ ನೇತೃತ್ವದ ಕಾರ್ಯಕಾರಿ ಸಮಿತಿಯ ಎಲ್ಲ ಪದಾಧಿಕಾರಿಗಳು ಮತ್ತು ಸದಸ್ಯರುಗಳಿಗೂ ಸಂಪಾದಕ ಮಂಡಳಿ ಅಭಾರಿಯಾಗಿದೆ. ಹಾಗೆಯೇ ತಾಂತ್ರಿಕವಾಗಿ ನೆರವು ನೀಡುತ್ತಾ ಬಂದಿರುವ ಸಂಘದ ಕಚೇರಿಯ ಸಿಬ್ಬಂದಿಗಳಲ್ಲಿ ಪ್ರತ್ಯಕ್ಷವಾಗಿ ಕಾಣುವ ವರ್ಗದವರಿಗೂ ಶ್ರೀ ಬಾಲಚಂದ್ರ, ಶ್ರೀ ಶೇಖರ್, ಶ್ರೀ ದೇವಯ್ಯ ಅವರುಗಳಲ್ಲದೆ ತೆರೆಮರೆಯಲ್ಲೇ ಇದ್ದುಕೊಂಡು ನೆರವಾಗುತ್ತಿರುವ ಎಲ್ಲ ಸಿಬ್ಬಂದಿಗಳಿಗೂ ಅಭಿಮತ ಸಂಪಾದಕ ಮಂಡಳಿಯ ಪರವಾಗಿ ಧನ್ಯವಾದಗಳನ್ನು ಹೇಳಬಯಸುತ್ತೇನೆ.

ಬಂಧುಗಳೇ, ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಉಳಿವು ಬೆಳವಣಿಗೆಗೆ ಸಂಬಂಧಿಸಿದ ಮತ್ತೊಂದು ಐತಿಹಾಸಿಕ ಘಟನೆ ಸೆಪ್ಟೆಂಬರ್ 6 ರಂದು ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ 'ದೆಹಲಿ' ಘಟಕದ ಉದ್ಘಾಟನೆ. 108 ವರ್ಷಗಳ ಇತಿಹಾಸವುಳ್ಳ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಸ್ತುತ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರು ತೆಗೆದುಕೊಂಡ ಈ ಐತಿಹಾಸಿಕ ನಿರ್ಧಾರ ಫಲವಾಗಿ ಅಸ್ತಿತ್ವಕ್ಕೆ ಬಂದ ದೆಹಲಿ ಘಟಕದ ಮೊದಲ ಅಧ್ಯಕ್ಷರನ್ನಾಗಿ ಶ್ರೀ ಸಿ.ಎಂ. ನಾಗರಾಜ ಅವರನ್ನು ನೇಮಿಸಿದ್ದು, ಗೌರವ ಕಾರ್ಯದರ್ಶಿಯಾಗಿ ಶ್ರೀ ಎನ್.ಪಿ. ಚಂದ್ರಶೇಖರ ಮತ್ತು ಗೌರವ ಕೋಶಾಧ್ಯಕ್ಷರನ್ನಾಗಿ ಶ್ರೀ ಸಂತೋಷ ಜೆ ಅವರುಗಳನ್ನು ನೇಮಿಸಿದ್ದಾರೆ. ಮುಖ್ಯವಾಗಿ ಸಮಸ್ತ ಕನ್ನಡ ಬಾಂಧವರೂ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿ ನೊಂದಾಯಿಸಿಕೊಳ್ಳಲು ಅನುಕೂಲವಾಗುವಂತೆ ಆನ್‌ಲೈನ್ ಸಂಪರ್ಕ ಕೊಂಡಿಯನ್ನು ಅಭಿವೃದ್ಧಿ ಪಡಿಸಿದ್ದು ಕನ್ನಡದ ಎಲ್ಲ ಬಂಧು ಭಗಿನಿಯರು ಸದಸ್ಯರಾಗುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ತನ್ನು ಬಲಪಡಿಸೋಣ ಹಾಗೂ ಕೋಟಿ ಸದಸ್ಯರನ್ನು ನೊಂದಾಯಿಸುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಕನಸನ್ನು ನನಸಾಗಿಸಲು ಕೈಜೋಡಿಸಿ ದುಡಿಯೋಣ ಬನ್ನಿ ಬಂಧುಗಳೇ.

ಇನ್ನು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ನೂತನ ಆಡಳಿತ ಮಂಡಳಿ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಶ್ರೀಯುತ ಬಿ.ಕೆ. ಬಸವರಾಜು ಅವರ ನೇತೃತ್ವದ ತಂಡ ಆಯ್ಕೆಯಾಗಿದೆ. ಶಾಲೆಯ ಪ್ರಗತಿಗೆ ಎಲ್ಲರೂ ಕೈ ಜೋಡಿಸೋಣ ಎನ್ನುತ್ತಾ ಹೊಸ ಆಡಳಿತ ಮಂಡಳಿಗೆ ಅಭಿಮತ ಓದುಗರ ಪರವಾಗಿ ಶುಭ ಕೋರುತ್ತೇನೆ. ಹಾಗೆಯೇ ದೆಹಲಿಯ ಪ್ರತಿಷ್ಠಿತ ಏಮ್ಸ್ ಅಸ್ಪತ್ರೆಯ ಮಹತ್ವದ ಸ್ಥಾನ ನಿರ್ದೇಶಕ ಹುದ್ದೆ. ಅಂತಹ ದೊಡ್ಡ ಸ್ಥಾನಕ್ಕೆ ಸರಳತೆಯೇ ಸಾಕಾರವೆತ್ತಂತಿರುವ ನುರಿತ ಮಕ್ಕಳ ತಜ್ಞವೈದ್ಯ ಡಾ. ಎಂ. ಶ್ರೀನಿವಾಸ್ ಅವರು ನೇಮಕಗೊಂಡಿದ್ದು ಪ್ರತಿಯೊಬ್ಬ ಕನ್ನಡಿಗರಿಗೂ ಹೆಮ್ಮೆಯ ವಿಷಯ. ಅವರಿಗೂ ಅಭಿಮತದ ಪರವಾಗಿ ಶುಭಾಶಯಗಳನ್ನು ಅರ್ಪಿಸುತ್ತಾ ಎಂದಿನಂತೆ ಸಂಘದ ಚಟುವಟಿಕೆಗಳ ಜೊತೆಗೆ ದೆಹಲಿ ಹಾಗೂ ಎನ್.ಸಿ.ಆರ್.ನ ಕನ್ನಡ ಸಂಘ ಸಂಸ್ಥೆಗಳು ಆಚರಿಸಿದ ಗಣೇಶೋತ್ಸವ ವರದಿಗಳ ಜೊತೆಗೆ ಇನ್ನೂ ಅನೇಕ ಸುದ್ದಿ ಸ್ವಾರಸ್ಯಗಳನ್ನು ಹೊತ್ತ ಅಭಿಮತ ಮೂವತ್ತ ಮೂರನೆಯ ವರ್ಷದ ಮೊದಲ ಸಂಚಿಕೆಯನ್ನು ನಿಮ್ಮ ಕೈಗಿಡುತ್ತಿದ್ದೇವೆ. ಧನ್ಯವಾದಗಳು.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 33 ಸಂಚಿಕೆ 1
ಅಕ್ಟೋಬರ್ 2022, ಬೆಲೆ ರೂ. 1

## ಅಧ್ಯಕ್ಷರ ನುಡಿ

ಆತ್ಮೀಯ ಕನ್ನಡಿಗರೇ,

ತಮಗೂ ಮತ್ತು ತಮ್ಮ ಕುಟುಂಬಕ್ಕೆ ನವರಾತ್ರಿ ಹಾಗು ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು.

ಬಂಧುಗಳೇ, ದೆಹಲಿ ಕರ್ನಾಟಕ ಸಂಘ ಎಪ್ಪತ್ತೈದು ವರ್ಷದ ಸಂಭ್ರಮದಲ್ಲಿ ನಡೆಯುತ್ತಿದೆ. ಈಗಾಗಲೇ ತಮ್ಮ ಮುಂದೆ ಉತ್ತಮವಾದ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಜೊತೆಗೆ ಸದಸ್ಯರಿಗೆ ಅನುಕೂಲವಾಗುವಂತಹ ಕೆಲಸ ಕಾರ್ಯಗಳಲ್ಲಿ ತೊಡಗಿದ್ದೇವೆ. ಸೆಪ್ಟೆಂಬರ್ ತಿಂಗಳಲ್ಲಿ ಎಲ್ಲ ಸಂಘ ಸಂಸ್ಥೆಗಳ ಗಣೇಶ ಚತುರ್ಥಿಯ ಕಾರ್ಯಕ್ರಮಗಳು, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಹೊಸ ಆಡಳಿತ ಮಂಡಳಿ ಆಯ್ಕೆಗಾಗಿ ಚುನಾವಣೆ ನಡೆದ ಕಾರಣ ಸಂಘದ ಕಾರ್ಯಕ್ರಮಗಳಲ್ಲಿ ಸ್ವಲ್ಪ ಕಡಿತಗೊಳಿಸಲಾಗಿತ್ತು. ಸೆಪ್ಟೆಂಬರ್ 18 ರಂದು ನಡೆದ ಚುನಾವಣೆಯಲ್ಲಿ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಶ್ರೀ ಬಿ.ಕೆ. ಬಸವರಾಜು ಮತ್ತು ಅವರ ತಂಡ ಆಯ್ಕೆಯಾಗಿ ಬಂದಿದ್ದಾರೆ. ಹೊಸ ಆಡಳಿತ ಮಂಡಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಆಡಳಿತ ಮಂಡಳಿ ಆಯ್ಕೆಗಾಗಿ ನಡೆಯುವ ಚುನಾವಣೆಯಲ್ಲಿ ಎಲ್ಲ ದೆಹಲಿ ಕನ್ನಡಿಗರು ಪಾಲ್ಗೊಳ್ಳುತ್ತಾರೆ. ಬೇರೆ ಬೇರೆ ತಂಡಗಳಲ್ಲಿ ಭಾಗವಹಿಸುತ್ತಾರೆ. ಆಯ್ಕೆಯಾಗಿ ಬಂದ ಮೇಲೆ ಕನ್ನಡ ಶಾಲೆಯ 1200 ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ನಾವೆಲ್ಲ ಒಟ್ಟಾಗಿ ದುಡಿಯಬೇಕೆಂದು ಹೊಸ ಆಡಳಿತ ಮಂಡಳಿಯಲ್ಲಿ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ಯಾವುದೇ ರಾಜಕೀಯವಿಲ್ಲದೆ ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತು ಮಕ್ಕಳ ಶೈಕ್ಷಣಿಕ ಗುಣಮಟ್ಟ ಅಭಿವೃದ್ಧಿಯಾಗಬೇಕೆಂದು ಮತ್ತು ಯಾವುದೇ ಪ್ರಾಂತ್ಯವಾರು, ಜಾತಿವಾರು ಭಾವನೆಗಳಿಲ್ಲದೆ ಅಭಿವೃದ್ಧಿ ಕಾರ್ಯಗಳು ನಡೆಯಲಿ. ಈ ಪ್ರಯತ್ನದಲ್ಲಿ ಹೊಸ ಅಧ್ಯಕ್ಷರ ಜೊತೆ ನಾವಿರುತ್ತೇವೆ. ನಮ್ಮ ಕನ್ನಡ ಶಾಲೆಯ ಮಕ್ಕಳ ಬಾಳು ಬಂಗಾರವಾಗಲಿ, ಹಿರಿಯರು ಕಟ್ಟಿರುವ ಆ ಶಾಲೆಯ ಜೊತೆಗೆ ಮತ್ತೊಂದು ಕನ್ನಡ ಶಾಲೆ ದೆಹಲಿಯಲ್ಲಿ ಆರಂಭವಾಗಲಿ ಎಂದು ಆಶಿಸುತ್ತೇನೆ.

ದೇಶದ ಸುಪ್ರಸಿದ್ಧ ಆಸ್ಪತ್ರೆ ನವದೆಹಲಿಯ ಏಮ್ಸ್‌ನ ನಿರ್ದೇಶಕರಾಗಿ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಮಾಡಿ, ಮುಂದೆ ಮಕ್ಕಳ ತಜ್ಞ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಹೆಮ್ಮೆಯ ಕನ್ನಡಿಗ ಡಾ. ಎಂ. ಶ್ರೀನಿವಾಸ್‌ರವರು ಆಯ್ಕೆಯಾಗಿರುವುದು ತುಂಬಾ ಖುಷಿ ತಂದಿದೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

ಬಂಧುಗಳೇ, ಇದೇ ಅಕ್ಟೋಬರ್ ತಿಂಗಳಲ್ಲಿ ದೆಹಲಿ ಕರ್ನಾಟಕ ಸಂಘದ ಜಿಲ್ಲಾವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತೆ ಮುಂದುವರಿಯಲಿವೆ. ಅಕ್ಟೋಬರ್ 15 ಮತ್ತು 16 ರಂದು ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲಾ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮ ನಡೆಯಲಿದ್ದು ಸುಮಾರು ನೂರ ಐವತ್ತುಕ್ಕೂ ಹೆಚ್ಚು ಕಲಾವಿದರು ಭಾಗವಹಿಸಲಿದ್ದಾರೆ. ಮಂಡ್ಯ, ಹಾಸನ, ತುಮಕೂರು ಜಿಲ್ಲೆಗಳಿಂದ ಬರುತ್ತಿರುವ ಕಲಾವಿದರು ನಾಟಕ, ನೃತ್ಯ, ಸಂಗೀತ ಲೋಕಕ್ಕೆ ತಮ್ಮನ್ನು ಕರೆದೊಯ್ಯಲಿದ್ದಾರೆ. ಈ ಕಾರ್ಯಕ್ರಮದ ಜವಾಬ್ದಾರಿಯನ್ನು ನಮ್ಮ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಸಂತೋಷ ಜೆ ರವರಿಗೆ ವಹಿಸಲಾಗಿದೆ. ಜೊತೆಗೆ ಅಕ್ಟೋಬರ್ 29 ಮತ್ತು 30 ರಂದು ಮಲೆನಾಡು ಜಿಲ್ಲಾ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮ ನಡೆಯಲಿದ್ದು ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಿಂದ ನೂರಕ್ಕೂ ಹೆಚ್ಚು ಕಲಾವಿದರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಸಾಂಸ್ಕೃತಿಕ ಉತ್ಸವದಲ್ಲಿ ಕನ್ನಡದ ಪೂಜಾರಿ ಎಂದೇ ಪ್ರಸಿದ್ಧರಾಗಿರುವ ಎಲ್ಲಾ ಟಿ.ವಿ. ಚಾನಲ್‌ಗಳ ಹರಟೆ ಕಾರ್ಯಕ್ರಮಗಳಲ್ಲಿ ಬರುತ್ತಿರುವ ವಿಶ್ವ ಖ್ಯಾತಿಯ ಶ್ರೀ ಹಿರೇಮಗಳೂರು ಕಣ್ಣನ್‌ರವರು ಬರಲಿದ್ದಾರೆ. ಇವರಿಂದ 'ಸಂಸಾರ–ಸಂಸ್ಕಾರ' ಹರಟೆ ಕಾರ್ಯಕ್ರಮ ಸಂಘದ ವೇದಿಕೆಯಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ಗಣ್ಯಾತಿಗಣ್ಯರು ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದ ಜವಾಬ್ದಾರಿಯನ್ನು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀ ಎಂ. ಶಿವಪ್ಪ ಮತ್ತು ಶ್ರೀ ಕೆ.ಎಸ್. ಮೂರ್ತಿರವರಿಗೆ ನೀಡಲಾಗಿದೆ.

ಆತ್ಮೀಯರೇ, ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಅತೀ ಹೆಚ್ಚು ಸಂಖ್ಯೆಯಲ್ಲಿ ಬಂದು ಭಾಗವಹಿಸಿ, ಕಲಾವಿದರಿಗೆ ಪ್ರೋತ್ಸಾಹಿಸಿ, ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕಾಗಿ ಪ್ರಾರ್ಥಿಸುತ್ತೇನೆ. ಬರುವ ನವೆಂಬರ್ ತಿಂಗಳಿನಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳು ಜರುಗಲಿದ್ದು, ಒಂದನೇ ತಾರೀಕು ಕರ್ನಾಟಕ ಸರ್ಕಾರದ ವಾಣಿಜ್ಯ ಇಲಾಖೆ ಮತ್ತು ದೆಹಲಿ ಕರ್ನಾಟಕ ಭವನದ ಸಹಕಾರದೊಂದಿಗೆ ದೆಹಲಿ ಕರ್ನಾಟಕ ಸಂಘವು ರಾಜ್ಯೋತ್ಸವದ ಮೊದಲ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಈ ಕಾರ್ಯಕ್ರಮದಲ್ಲಿ ಖ್ಯಾತ ಕನ್ನಡ ಹಾಸ್ಯಗಾರ ಮತ್ತು ವಾಗ್ಮಿ ಪ್ರೊ. ಕೃಷ್ಣೇಗೌಡರು ಭಾಗವಹಿಸುತ್ತಿದ್ದಾರೆ. ದೆಹಲಿಯ ಕರ್ನಾಟಕ ಭವನವು ಈ ಹಿಂದೆ ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ರಾಜ್ಯೋತ್ಸವ ಕಾರ್ಯಕ್ರಮ ಆಯೋಜಿಸುತ್ತಿದ್ದು, ಕಳೆದ ಮೂರು ವರ್ಷಗಳಿಂದ ಆಯೋಜನೆ ಮಾಡಿರಲಿಲ್ಲ. ಈ ಬಾರಿ ಅವರು ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನಮ್ಮ ಸಂಘದ ಜೊತೆಗೂಡಿದ್ದಾರೆ.

ಬಂಧುಗಳೇ, ರಾಜ್ಯೋತ್ಸವ ಸಂದರ್ಭದಲ್ಲಿ ಸ್ಥಳೀಯ ಕನ್ನಡ ಸಂಘ ಸಂಸ್ಥೆಗಳಿಗೆ ಅವಕಾಶ ನೀಡುವ ಮೂಲಕ ಎಲ್ಲಾ ಸಂಘ ಸಂಸ್ಥೆಗಳ ಪರವಾಗಿ ಸಾಂಸ್ಕೃತಿಕ ಜಾನಪದ ಶೈಲಿಯ ನೃತ್ಯ ರೂಪಕ ಕಾರ್ಯಕ್ರಮಗಳನ್ನು ನೀಡಬೇಕೆಂದು ಮನವಿಯನ್ನು ತಮಗೆಲ್ಲರಿಗೂ ಕಳಿಸಲಾಗಿದೆ. ಸ್ಥಳೀಯ ಕಲಾವಿದರಿಗೆ ಮತ್ತು ನಮ್ಮ ದೆಹಲಿ ಕನ್ನಡಿಗರ ಮಕ್ಕಳಿಗೆ ಹೆಚ್ಚಿನ ಅವಕಾಶ ನೀಡಲಿದ್ದು, ಪ್ರತಿ ಕಲಾತಂಡಗಳಿಗೆ ಸಂಭಾವನೆ ಸಹ ನೀಡಲಾಗುವುದು ಜೊತೆಗೆ ನವೆಂಬರ್ ತಿಂಗಳಲ್ಲಿ ನಮ್ಮ ಸದಸ್ಯರ ಮಕ್ಕಳಿಗೆ ಅವಶ್ಯಕತೆ ಆಧಾರದ ಮೇರೆಗೆ ಅರ್ಹತೆಗೆ ಒತ್ತುಕೊಟ್ಟು ವಿದ್ಯಾರ್ಥಿ ವೇತನವನ್ನು ಸಹ ನೀಡಲಿದ್ದೇವೆ. ಕನ್ನಡ ಕಲಿಕಾ ಕೇಂದ್ರವನ್ನು ಸಂಘದಲ್ಲಿ ಸ್ಥಾಪಿಸುವ ಮತ್ತು ಅತೀ ಹೆಚ್ಚು ಕನ್ನಡಿಗರು ಇರುವ ಜಾಗದಲ್ಲಿ ಮಕ್ಕಳಿಗೆ ಕನ್ನಡವನ್ನು ಕಲಿಸುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ದೆಹಲಿ ಕರ್ನಾಟಕ ಸಂಘದಲ್ಲಿ ಹಿಂದುಸ್ತಾನಿ ಸಂಗೀತವನ್ನು ಕಲಿಸುವ ಹಾಗು ಶಾಸ್ತ್ರೀಯ ನೃತ್ಯ ತರಬೇತಿಯನ್ನು ನೀಡುವ ಕಾರ್ಯವನ್ನು ನವೆಂಬರ್ ತಿಂಗಳಿಂದ ಪ್ರಾರಂಭ ಮಾಡಲಿದ್ದೇವೆ.

ಎಲ್ಲಾ ಜಿಲ್ಲಾವಾರು ಸಾಂಸ್ಕೃತಿಕ ಉತ್ಸವ ಮತ್ತು ಸಾಹಿತ್ಯಿಕ ಕಾರ್ಯಕ್ರಮಗಳು ಮುಗಿದ ನಂತರ ಅಮೃತ ಮಹೋತ್ಸವ ಸಮಾರೋಪ ಕಾರ್ಯಕ್ರಮವನ್ನು ನವದೆಹಲಿಯ ತಾಲ್ಕಟೋರಾ ಸಭಾಂಗಣದಲ್ಲಿ ನಡೆಸಲು ನಿರ್ಧಾರ ಮಾಡಿದ್ದೇವೆ. ಈ ಕಾರ್ಯಕ್ರಮದ ಆಯೋಜನೆ, ಪೂರ್ವಭಾವಿ ಸಿದ್ಧತೆ, ರೂಪುರೇಷೆಗಳ ಬಗ್ಗೆ ಎಲ್ಲಾ ಸಂಘ ಸಂಸ್ಥೆಗಳ ಅಧ್ಯಕ್ಷರುಗಳು, ಕಾರ್ಯದರ್ಶಿಗಳು ಮತ್ತು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರುಗಳು, ಹಿರಿಯ ದೆಹಲಿ ಕನ್ನಡಿಗರು ಮತ್ತು ಮಾಧ್ಯಮ ಮಿತ್ರರೊಂದಿಗೆ ಸೆಪ್ಟೆಂಬರ್ 25 ರಂದು ನಡೆದ ಸಭೆಯಲ್ಲಿ ಚರ್ಚಿಸಿ ಅವರ ಸಲಹೆ ಮತ್ತು ಸೂಕ್ತ ಮಾರ್ಗದರ್ಶನ ತೆಗೆದುಕೊಳ್ಳಲಾಗಿದೆ. 2023ರ ಫೆಬ್ರವರಿ ತಿಂಗಳಲ್ಲಿ ನಡೆಯಲಿರುವ ಸಮಾರೋಪ ಸಮಾರಂಭದ "ಬಾರಿಸು ಕನ್ನಡ ಡಿಂಡಿಮವ" ಕಾರ್ಯಕ್ರಮದಲ್ಲಿ ಅತೀ ಹೆಚ್ಚು ಕನ್ನಡಿಗರು ಭಾಗವಹಿಸಲಿದ್ದು ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಜೊತೆಗೆ ಸಂಘಕ್ಕೆ ದುಡಿದಂತಹ ಮಹನೀಯರನ್ನು ಗಣ್ಯಾತಿಗಣ್ಯರ ಸಮ್ಮುಖದಲ್ಲಿ ಅಭಿನಂದಿಸುವ ಕೆಲಸ ಮಾಡಲಿದ್ದೇವೆ. ಈ ಸಮಾರೋಪ ಕಾರ್ಯಕ್ರಮದಲ್ಲಿ ಸಾವಿರಾರು ಕಲಾವಿದರು, ನಾಡಿನ ಗುರುಹಿರಿಯರು, ಪರಮಪೂಜ್ಯರು ಕೇಂದ್ರ ಮಂತ್ರಿಗಳು, ಸಂಸದರು, ರಾಜ್ಯದ ರಾಜ್ಯಪಾಲರು, ಮುಖ್ಯಮಂತ್ರಿಗಳು, ಮಂತ್ರಿಗಳು ಎಲ್ಲರನ್ನು ಕರೆದು ಕಾರ್ಯಕ್ರಮ ಆಯೋಜನೆ ಮಾಡಲು ಭರದಿಂದ ಸಿದ್ಧತೆ ನಡೆಯುತ್ತಿದೆ. ಈ ಸುಂದರವಾದ ಅಮೃತ ಮಹೋತ್ಸವ ಸಮಾರೋಪ ಕಾರ್ಯಕ್ರಮಕ್ಕೆ ತಾವೆಲ್ಲರೂ ಬಂದು ಸಹಕರಿಸಬೇಕೆಂದು ತಮ್ಮನ್ನು ವಿನಂತಿಸುತ್ತೇನೆ. ವಿಶೇಷವಾಗಿ ದೆಹಲಿಯ ಸ್ಥಳೀಯ ಕನ್ನಡಪರ ಸಂಘ ಸಂಸ್ಥೆಗಳು ಕೈಜೋಡಿಸಿ ಈ ಕಾರ್ಯಕ್ರಮದ ರೂಪು ರೇಷೆಗಳಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದಿಂದ ವಿಶೇಷ ಸ್ಮರಣ ಸಂಚಿಕೆಯನ್ನು ಹೊರ ತರುತ್ತಿದ್ದೇವೆ. ಕಳೆದ 75 ವರ್ಷಗಳಲ್ಲಿ ದೆಹಲಿ ಕರ್ನಾಟಕ ಸಂಘ ನಡೆದು ಬಂದ ದಾರಿಯನ್ನು ಬಿಂಬಿಸುವ ಕಿರು ಪುಸ್ತಕವನ್ನು ಸಹ ಈ ಸಂದರ್ಭದಲ್ಲಿ ತರುತ್ತಿದ್ದೇವೆ. ಈ ಕಾರ್ಯಕ್ರಮ ಇತಿಹಾಸದಲ್ಲಿ ಉಳಿಯುವಂತಹ ಕಾರ್ಯಕ್ರಮವಾಗಲು ತಮ್ಮೆಲ್ಲರ ಸಹಕಾರ ಅಗತ್ಯವಾಗಿದೆ. ಈ ಎಲ್ಲ ಮುಂಬರುವ ಕಾರ್ಯಕ್ರಮಗಳಿಗೆ ತಮ್ಮ ಉಪಸ್ಥಿತಿ, ಭಾಗವಹಿಸುವಿಕೆ ಅವಶ್ಯಕವಾಗಿ ಇರಬೇಕೆಂದು ನಾನು ಪ್ರಾರ್ಥಿಸುತ್ತೇನೆ.

**ರಾಷ್ಟ್ರಪಿತ ಮಹಾತ್ಮ ಗಾಂಧಿ ಜಯಂತಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ, ದಸರಾ ಮತ್ತು ದೀಪಾವಳಿ ಹಬ್ಬಗಳ ಶುಭಾಶಯಗಳೊಂದಿಗೆ.**

***ಸಿ.ಎಂ. ನಾಗರಾಜ***
**ಅಧ್ಯಕ್ಷರು**

## ಮುನ್ನೋಟ

ಆತ್ಮೀಯರೇ,

ನಮ್ಮೆಲ್ಲ ದೆಹಲಿಗರಿಗೆ ಏರುತ್ತಿರುವ ಬಿಸಿಲ ಬೇಗೆಯಿಂದ ಮುಕ್ತಿ ದೊರಕಿಸುವಂತೆ ಪ್ರೀತಿಯ ಸಿಂಚನ ನೀಡಿದ ಮಳೆರಾಯನಿಗೆ ವಂದಿಸಿ, ಹಬ್ಬಗಳ ಸರಮಾಲೆಯನ್ನೊತ್ತು ತಂದ ಅಕ್ಟೋಬರ್ ತಿಂಗಳಿಗೆ ಸ್ವಾಗತ ಕೋರುತ್ತೇನೆ.

ದೆಹಲಿ ಕನ್ನಡಿಗರಿಗೆ ಅಕ್ಟೋಬರ್ ತಿಂಗಳು ಪೂರ್ತಿ ದಸರಾ, ದೀಪಾವಳಿ ಹಬ್ಬಗಳ ಸಂಭ್ರಮವಾದರೆ, ನವೆಂಬರ್ ನಮ್ಮ ನಾಡಹಬ್ಬ ರಾಜ್ಯೋತ್ಸವ ಸಂಭ್ರಮ. ಇವುಗಳ ಜೊತೆಗೆ ಸಂಘದ ಅಮೃತ ಮಹೋತ್ಸವ ಸಂಭ್ರಮಾಚರಣೆ ಸಂದರ್ಭದಲ್ಲಿ ಜಿಲ್ಲಾವಾರು ಉತ್ಸವದ ಅಂಗವಾಗಿ 'ಮಂಡ್ಯ, ಹಾಸನ ಮತ್ತು ತುಮಕೂರು' ಜಿಲ್ಲೆಗಳ "ಸಾಂಸ್ಕೃತಿಕ ಉತ್ಸವ" ಮತ್ತು ಮಲೆನಾಡು ಪ್ರದೇಶದ 'ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ "ಮಲೆನಾಡು ಸಾಂಸ್ಕೃತಿಕ ಉತ್ಸವ"ಗಳ ಹೂರಣ. ಇವುಗಳೊಂದಿಗೆ ಸಂಘದ ಮುಂದಿನ ಕಾರ್ಯಕ್ರಮಗಳ ತಯಾರಿ ಸಹ ಪ್ರಾರಂಭವಾಗಿದೆ.

ಫೆಬ್ರವರಿ 26 ಮತ್ತು 27, 2023 ರಂದು ಅಮೃತ ಮಹೋತ್ಸವ ಕಾರ್ಯಕ್ರಮಗಳ ಸಮಾರೋಪ ಸಮಾರಂಭಕ್ಕಾಗಿ ತಾಲ್ಕಟೋರ ಒಳಾಂಗಣವನ್ನು ಕಾಯ್ದಿರಿಸಲಾಗಿದೆ.

ಇತ್ತೀಚೆಗೆ ಅಂದರೆ ದಿನಾಂಕ 18.09.2022 ರ ಭಾನುವಾರದಂದು ನಡೆದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಚುನಾವಣೆಯಲ್ಲ ದೆಹಲಿಯ ಕನ್ನಡಿಗರೆಲ್ಲರೂ ಭಾಗವಹಿಸಿ ಶ್ರೀ ಬಸವರಾಜು ಹಾಗೂ ಮೈಲಾರಪ್ಪನವರ ತಂಡವನ್ನು ಗೆಲ್ಲಿಸಿ, ಸಂಸ್ಥೆಯನ್ನು ಮುನ್ನಡೆಸುವ ಜವಾಬ್ದಾರಿಯನ್ನು ನೀಡಿರುತ್ತೀರಿ. ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅವರಿಗೆ ಅಭಿನಂದನೆಗಳು.

ಸ್ಥಳೀಯ ಕನ್ನಡಿಗರಿಗೆ ಅವಕಾಶ ನೀಡುವ ನಿಟ್ಟಿನಲ್ಲಿ ನವೆಂಬರ್ ತಿಂಗಳಿನಲ್ಲಿ 'ಸಮೂಹ ನೃತ್ಯ' ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಸದಸ್ಯರು ಇದರ ಲಾಭವನ್ನು ಪಡೆಯಬೇಕೆಂದು ಕೋರುತ್ತೇನೆ.

*ಆರ್. ರೇಣುಕುಮಾರ್*
*ಪ್ರಧಾನ ಕಾರ್ಯದರ್ಶಿ*

## ಸಂಘದ ಮುಂಬರುವ ಕಾರ್ಯಕ್ರಮಗಳು

### ಅಕ್ಟೋಬರ್ 15, 16, 2022

**ಅಮೃತ ಮಹೋತ್ಸವ ಸಂಭ್ರಮಾಚರಣೆ ಸಂದರ್ಭದಲ್ಲಿ ಜಿಲ್ಲಾವಾರು ಉತ್ಸವದ ಅಂಗವಾಗಿ 'ಮಂಡ್ಯ, ಹಾಸನ ಮತ್ತು ತುಮಕೂರು' ಜಿಲ್ಲೆಗಳ "ಸಾಂಸ್ಕೃತಿಕ ಉತ್ಸವ"**

### ಅಕ್ಟೋಬರ್ 29, 30, 2022

**ಅಮೃತ ಮಹೋತ್ಸವ ಸಂಭ್ರಮಾಚರಣೆ ಸಂದರ್ಭದಲ್ಲಿ ಜಿಲ್ಲಾವಾರು ಉತ್ಸವದ ಅಂಗವಾಗಿ ಮಲೆನಾಡು ಪ್ರದೇಶದ 'ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ "ಮಲೆನಾಡು ಸಾಂಸ್ಕೃತಿಕ ಉತ್ಸವ"**

### ನವೆಂಬರ್ 1, 2022, ಬೆಳಿಗ್ಗೆ 9.00 ಗಂಟೆಗೆ

**ಕನ್ನಡ ರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ**

### ನವೆಂಬರ್ 1, 2022, ಸಂಜೆ 5.00 ಗಂಟೆಗೆ

**ಕರ್ನಾಟಕ ಸರ್ಕಾರದ ವಾಣಿಜ್ಯ ಇಲಾಖೆ ಮತ್ತು ದೆಹಲಿ ಕರ್ನಾಟಕ ಭವನದ ಸಹಕಾರದೊಂದಿಗೆ ಕರ್ನಾಟಕ ರಾಜ್ಯೋತ್ಸವದ ಕಾರ್ಯಕ್ರಮ**

## ವಿದ್ಯಾರ್ಥಿ ವೇತನ 2022-23

ದೆಹಲಿ ಕರ್ನಾಟಕ ಸಂಘದಿಂದ 2022-23ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.

ಸಂಘದ ಸದಸ್ಯರು ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಅಕ್ಟೋಬರ್ 17 ರಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು 15 ನವೆಂಬರ್ 2022 ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು.

ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಪ್ರಧಾನ ಕಾರ್ಯದರ್ಶಿ

## ಸೂಚನೆ

ದೆಹಲಿ ಕರ್ನಾಟಕ ಸಂಘದಲ್ಲಿ ನವೆಂಬರ್ ತಿಂಗಳಲ್ಲಿ ಕನ್ನಡ ಕಲಿಕಾ ಕೇಂದ್ರವನ್ನು ಸಂಘದಲ್ಲಿ ಸ್ಥಾಪಿಸುವ ಮತ್ತು ಅತೀ ಹೆಚ್ಚು ಕನ್ನಡಿಗರು ಇರುವ ಜಾಗದಲ್ಲಿ ಮಕ್ಕಳಿಗೆ ಕನ್ನಡವನ್ನು ಕಲಿಸುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಇದಲ್ಲದೆ ಹಿಂದುಸ್ತಾನಿ ಸಂಗೀತವನ್ನು ಕಲಿಸುವ ಹಾಗು ಶಾಸ್ತ್ರೀಯ ನೃತ್ಯ, ನೃತ್ಯ ತರಬೇತಿಯನ್ನು ನೀಡಲಾಗುವುದು.

ಈ ಸಂಬಂಧ ಇಚ್ಛೆಯುಳ್ಳವರು ತಮ್ಮ ಹೆಸರನ್ನು ಸಂಘದಲ್ಲಿ ನೊಂದಾಯಿಸಿಕೊಳ್ಳಬೇಕಾಗಿ ವಿನಂತಿ.

**ಅಧ್ಯಕ್ಷರು**



ದೆಹಲಿ ಕರ್ನಾಟಕ ಸಂಘದಿಂದ ಸ್ಥಳೀಯ ಕಲಾವಿದರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಂಘವು ಕಾರ್ಯ ಪ್ರವೃತ್ತವಾಗಿದೆ. ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ನೀಡುವ ಸಲುವಾಗಿ ಅಮೃತ ಮಹೋತ್ಸವದ ಹಾಗೂ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನವೆಂಬರ್ ತಿಂಗಳಿನಲ್ಲಿ ದೆಹಲಿ ಕನ್ನಡಿಗರಿಗೆ, ಸ್ಥಳೀಯ ಸಂಘ ಸಂಸ್ಥೆಗಳ ಕಲಾವಿದರಿಗೆ ಜಾನಪದ ಸಾಹಿತ್ಯ ಆಧಾರಿತ ಸಮೂಹ ನೃತ್ಯವನ್ನು ಆಯೋಜಿಸಲಾಗಿದೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿ. ಭಾಗವಹಿಸುವ ತಂಡಗಳಿಗೆ ಪ್ರೋತ್ಸಾಹ ಧನವನ್ನು ಸಂಘದಿಂದ ನೀಡಲಾಗುವುದು. ಇದರಲ್ಲಿ ಕಾರ್ಯಕ್ರಮ ನೀಡಲು ಬಯಸುವವರು ತಮ್ಮ ನೃತ್ಯ ಪ್ರಕಾರ ಹಾಗೂ ತಂಡದ ಪೂರ್ಣ ವಿವರಗಳೊಂದಿಗೆ ಸಂಘದ ಕಚೇರಿಗೆ ಸಲ್ಲಿಸತಕ್ಕದ್ದು.

**ನಿಯಮಗಳು:**

1. ಸಮೂಹ ನೃತ್ಯದ ಒಂದು ತಂಡದಲ್ಲಿ ಕನಿಷ್ಠ 6 ಜನರಿರಬೇಕು. ಅದಕ್ಕಿಂತ ಹೆಚ್ಚು ಜನರಿರಬಹುದು. (ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ)
2. ಜಾನಪದ ನೃತ್ಯ ಕನ್ನಡ ಪರ ಸಾಹಿತ್ಯ ಹಾಗೂ ಪರಂಪರೆಗೆ ಒಳಪಟ್ಟಿರಬೇಕು.
3. ಒಂದು ತಂಡದಲ್ಲಿ ಭಾಗವಹಿಸಿದವರು ಇನ್ನೊಂದು ತಂಡದಲ್ಲಿ ಭಾಗವಹಿಸುವಂತಿಲ್ಲ.

**ಹೆಚ್ಚಿನ ಮಾಹಿತಿಗಳಿಗೆ ಸಂಪರ್ಕಿಸಿ :**
**ಸಂಘದ ಕಚೇರಿ : 011-26109615**

**ಸಿ.ಎಂ. ನಾಗರಾಜ**
**ಅಧ್ಯಕ್ಷರು**

**ಆರ್. ರೇಣುಕುಮಾರ್**
**ಪ್ರಧಾನ ಕಾರ್ಯದರ್ಶಿ**

## ದೆಹಲಿ ಕರ್ನಾಟಕ ಸಂಘದಲ್ಲಿ ಕಲ್ಯಾಣ ಕರ್ನಾಟಕ ಉತ್ಸವ

# ಹೈದ್ರಾಬಾದ್ ವಿಮೋಚನಾ ಚಳುವಳಿಯಲ್ಲಿ ಹೋರಾಡಿದ ಮಹನೀಯರನ್ನು ಸ್ಮರಿಸೋಣ-ಅಮರೇಶ್ವರ ಪಾಟೀಲ್



ಹೈದ್ರಾಬಾದ್ ಕರ್ನಾಟಕ ವಿಮೋಚನಾ ಚಳುವಳಿಯಲ್ಲಿ ಕಲ್ಯಾಣ ಕರ್ನಾಟಕದ ಭಾಗದ ಅನೇಕರು ಹೋರಾಡಿದ್ದಾರೆ. ಈ ಹೋರಾಟಗಾರರ ಪರಿಶ್ರಮದ ಫಲದಿಂದ ಹೈದ್ರಾಬಾದ ಕರ್ನಾಟಕವು 1948ರ ಸೆಪ್ಟೆಂಬರ್ 17ರಂದು ನಿಜಾಮರಿಂದ ವಿಮೋಚನೆ ಹೊಂದಿತು ಎಂದು ಕೇಂದ್ರ ರಾಸಾಯನಿಕ, ರಸಗೊಬ್ಬರ ಹಾಗೂ ನವೀಕರಿಸಬಹುದಾದ ಇಂಧನ ಇಲಾಖೆಯ ರಾಜ್ಯ ಸಚಿವ ಮಾನ್ಯ ಶ್ರೀ ಭಗವಂತ್ ಖೂಬಾ ಅವರ ಆಪ್ತ ಕಾರ್ಯದರ್ಶಿ ಶ್ರೀ ಅಮರೇಶ್ವರ ಪಾಟೀಲ್ ಅವರು ಹೇಳಿದರು. ಸೆಪ್ಟೆಂಬರ್ 17ರಂದು ಸಂಘದ ಆವರಣದಲ್ಲಿ ದೆಹಲಿ ಕರ್ನಾಟಕ ಸಂಘವು ಆಯೋಜಿಸಿದ್ದ ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ಕಲ್ಯಾಣ ಕರ್ನಾಟಕ ಉತ್ಸವದ ಕಾರಣೀ ಪುರುಷ ಸರ್ದಾರ್ ವಲ್ಲಭಬಾಯಿ ಪಟೇಲರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಹೈದ್ರಾಬಾದ್ ಕರ್ನಾಟಕ ಇತಿಹಾಸವನ್ನು ಅವರು ಮೆಲುಕು ಹಾಕಿದರು. ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ಪಾಲ್ಗೊಳ್ಳುವ ಸದಾವಕಾಶ ತಮಗೆ ಒದಗಿಸಿರುವುದಕ್ಕೆ ಅವರು ಧನ್ಯವಾದ ತಿಳಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕೇಂದ್ರ ಸಚಿವರಾದ ಶ್ರೀ ಭಗವಂತ್ ಖೂಬಾ ಅವರು ಕಳೆದ ವರ್ಷ ದೆಹಲಿ ಕರ್ನಾಟಕ ಸಂಘ ಆಚರಿಸಿದ ಕಲ್ಯಾಣ ಕರ್ನಾಟಕದ ಪ್ರಥಮ ಉತ್ಸವಕ್ಕೆ ಚಾಲನೆ ನೀಡಿದ್ದರು. ಈ ಬಾರಿಯೂ ಕೇಂದ್ರ ಸಚಿವರು ಆಗಮಿಸಬೇಕಿತ್ತು. ಸಂಸದೀಯ ಕಾರ್ಯಗಳ ಒತ್ತಡದ ಹಿನ್ನೆಲೆಯಲ್ಲಿ ಆಗಮಿಸಲಾಗದಿದ್ದರೂ ಕೇಂದ್ರ ಸಚಿವರ ಆಪ್ತ ಕಾರ್ಯದರ್ಶಿಯವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಧ್ವಜಾರೋಹಣ ನೆರವೇರಿಸಿರುವುದಕ್ಕೆ ಕೃತಜ್ಞತೆ ತಿಳಿಸಿದರು. 'ಹೈದ್ರಾಬಾದ್ ಕರ್ನಾಟಕ ವಿಮೋಚನಾ ದಿನ' ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮವನ್ನು ಅತ್ಯಂತ ಮುತುವರ್ಜಿವಹಿಸಿ ಮುಂಚೂಣಿಯಲ್ಲಿ ನಿಂತು, ಕಲ್ಯಾಣ ಕರ್ನಾಟಕ ಉತ್ಸವದ ಇತಿಹಾಸ ಅದರ ಹಿನ್ನೆಲೆಯ ಕುರಿತು ಬಹು ವಿಸ್ತೃತವಾಗಿ ಮಾತನಾಡಿದ ದೆಹಲಿ ಹಿರಿಯ ಕನ್ನಡಿಗ ಹಾಗೂ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಕಾರ್ಯದರ್ಶಿ ಶ್ರೀ ವಿ.ವಿ. ಬಿರಾದಾರ ಅವರಿಗೂ ಧನ್ಯವಾದ ಸಮರ್ಪಿಸಿದರು.

ಶ್ರೀ ವಿ.ವಿ. ಬಿರಾದಾರ ಅವರು ಮಾತನಾಡಿ, ದಕ್ಷಿಣ ಭಾರತದ ಜಲಿಯನ್ ವಾಲಾಬಾಗ್ ಎಂದು ಪ್ರಸಿದ್ಧವಾಗಿರುವ ಬೀದರ ಜಿಲ್ಲೆಯ 'ಗೋರ್ಟಾ' ಎಂಬ ಗ್ರಾಮದ ಮೇಲೆ 1948ರ ಮೇ ತಿಂಗಳ ಮೊದಲ ವಾರದಲ್ಲಿ ರಜಾಕರು ದಾಳಿ ಮಾಡಿ, ಅಲ್ಲಿದ್ದ ಎರಡುನೂರು ಜನರನ್ನೆಲ್ಲ ಒಟ್ಟುಗೂಡಿಸಿ, ಸುಟ್ಟು ಹಾಕಿದರು. ಇದೇ ಗೋರ್ಟಾದಲ್ಲಿ ಕೇಂದ್ರದ ಗೃಹ ಸಚಿವ ಶ್ರೀ ಅಮಿತ್ ಶಾ ಅವರು ಸರ್ದಾರ್ ವಲ್ಲಭಬಾಯಿ ಪಟೇಲರ ಸ್ಮಾರಕ ಕಾರ್ಯಕ್ರಮಕ್ಕೆ ಇತ್ತೀಚೆಗೆ ಚಾಲನೆ ನೀಡಿದ್ದಾರೆ. 'ಮುಚಳಂಬ' ಗ್ರಾಮದಲ್ಲಿಯೂ ಸಹ ಮಾಧವರಾವ್ ಪಾಟೀಲ್ ಮನೆಯಲ್ಲಿ 70 ಜನರು ರಜಾಕರರ ಹಾವಳಿಗೆ ಹೆದರಿ ಒಳಗೆ ಅಡಗಿದ್ದಾಗ ಚಿಮಣಿ ಎಣ್ಣೆ ಹಾಕಿ ಎಲ್ಲರನ್ನೂ ಕೊಲೆಗೈದ ಕರಾಳ ಘಟನೆ ಮರೆಯಲಾರದ ಸಂಗತಿ ಎಂದರು.

ಅಲ್ಲದೆ ಭಾಲ್ಕಿ ಹಿರೇಮಠ ಸಂಸ್ಥಾನವು ಗಡಿ ಭಾಗದಲ್ಲಿ ಅನೇಕ ಬಡ ಕುಟುಂಬಗಳಿಗೆ ಆಶ್ರಯ ನೀಡಿತ್ತು. ಪೂಜ್ಯ ಶ್ರೀ ಚನ್ನಬಸವ ಪಟ್ಟದೇವರು ಹೊರಗೆ ಉರ್ದು ಬೋರ್ಡು ಹಾಕಿ ಮಕ್ಕಳಿಗೆ ಕನ್ನಡ ಕಲಿಸುತ್ತಿದ್ದರು. ಭೀಮಣ್ಣ ಖಂಡ್ರೆ, ಶಿವಾ ಖಂಡ್ರೆ, ಬಂಡೆಪ್ಪ ಮೊದಲಾದವರು ಬೀದರ ಜಿಲ್ಲೆಯಲ್ಲಿ ರಜಾಕರ ವಿರುದ್ಧ ಹೋರಾಟ ನಡೆಸಿದ ಪರಿಣಾಮವಾಗಿ, ನಿಜಾಮ್ ಸರ್ಕಾರವು ಅವರ ಆಸ್ತಿಯನ್ನು ಜಪ್ತಿ ಮಾಡಿ, ಅನೇಕ ರೀತಿಯಲ್ಲಿ ತೊಂದರೆ ಕಷ್ಟಗಳಿಗೀಡು ಮಾಡಿದರೆಂದು ಇತಿಹಾಸದ ವಿವರ ತಿಳಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಆಗಮಿಸಿದ ಎಲ್ಲಾ ಅತಿಥಿ ಗಣ್ಯರಿಗೆ ಧನ್ಯವಾದ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ದೆಹಲಿ ಎನ್.ಸಿ.ಆರ್. ನಿಂದ ಅಪಾರ ಸಂಖ್ಯೆಯಲ್ಲಿ ಕನ್ನಡಿಗರು ಭಾಗವಹಿಸಿದ್ದರು.

**ವಿ.ವಿ. ಬಿರಾದಾರ**
ಹಿರಿಯ ದೆಹಲಿ ಕನ್ನಡಿಗ



# ಕನ್ನಡವನ್ನು ಉಳಿಸಿ ಬೆಳೆಸಲು ಪ್ರತಿಯೊಬ್ಬ ಕನ್ನಡಿಗರೂ ಕನ್ನಡದ ರಾಯಭಾರಿಗಳಾಗಬೇಕು ಎಂದು ಕರೆ ನೀಡಿದ ನಾಡೋಜ ಡಾ. ಮಹೇಶ ಜೋಶಿ




ಕರ್ನಾಟಕದಲ್ಲಿ ಶೇ.64 ರಷ್ಟು ಜನ ಮಾತ್ರ ಕನ್ನಡದಲ್ಲಿ ಮಾತನಾಡುತ್ತಿದ್ದಾರೆ. ಕನ್ನಡ ಶಾಲೆಗಳು ತೀರ ದುಸ್ಥಿತಿಯಲ್ಲಿವೆ. ಹಾಗಾಗಿ ಪ್ರತಿಯೊಬ್ಬ ಕನ್ನಡಿಗರೂ ಕನ್ನಡದ ರಾಯಭಾರಿಗಳಾಗಿ ಕನ್ನಡವನ್ನು ಉಳಿಸಿ ಬೆಳೆಸಬೇಕು. ಇಲ್ಲದಿದ್ದರೆ ಮುಂದಿನ ಹತ್ತು ವರ್ಷಗಳಲ್ಲಿ ಕನ್ನಡ ಶಾಲೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಯಾವುದು ಉಳಿಯುವುದಿಲ್ಲ. ಇಂತಹ ಪರಿಸ್ಥಿತಿಯನ್ನು ಎದುರಿಸಲು ಕರ್ನಾಟಕ ಕಾನೂನು ಆಯೋಗ ಸಮಗ್ರ ಕನ್ನಡ ಅಭಿವೃದ್ಧಿಗಾಗಿ ಕಾನೂನನ್ನು ಜಾರಿಗೆ ತರುವ ಚಿಂತನೆ ನಡೆಸುತ್ತಿದೆ. ಇದನ್ನು ಮುಂಬರುವ ಅಧಿವೇಶನದಲ್ಲಿ ಕಾನೂನನ್ನಾಗಿ ರೂಪುಗೊಳಿಸುವಂತೆ ಕ್ರಮ ಕೈಗೊಳ್ಳುವಂತೆ ಮಾಡಲು ಭಗೀರಥ ಪ್ರಯತ್ನವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಮಾಡಲಾಗುತ್ತಿದೆ ಎಂದು ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಸಭಾಂಗಣದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ರಾಜ್ಯಾಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರು ಹೇಳಿದರು.

"ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯಸಿ" ಎಂಬ ರಾಮಾಯಣ ಮಹಾಕಾವ್ಯದಲ್ಲಿನ ವಾಕ್ಯವನ್ನು ಉಲ್ಲೇಖಿಸಿ ತಾಯಿ ಮತ್ತು ತಾಯ್ನೆಲ ಸ್ವರ್ಗಕ್ಕಿಂತಲು ಮಿಗಿಲು ಎಂದು ತಿಳಿಸುತ್ತಾ, ನಾವು ಕನ್ನಡ, ಕನ್ನಡಿಗ ಮತ್ತು ಕರ್ನಾಟಕದ ಬಗ್ಗೆ ಕಾಳಜಿ ವಹಿಸುವ ಮೂಲಕ ಕನ್ನಡಿಗರ ನೋವು ನಲಿವುಗಳಿಗೆ ಸ್ಪಂದಿಸುವ ಕೆಲಸವನ್ನು ಸಾಹಿತ್ಯ ಪರಿಷತ್ತು ಮಾಡುತ್ತಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತನ್ನು ಸಾಹಿತಿಗಳಿಗೆ ಮಾತ್ರ ಸೀಮಿತವಾಗುವಂತೆ ಮಾಡದೆ ಕನ್ನಡ ಭಾಷೆ ಸಾಹಿತ್ಯದ ಬಗ್ಗೆ ಕಾಳಜಿ ಇರುವ ಎಲ್ಲ ಕನ್ನಡಿಗರ ಮನೆ ಬಾಗಿಲಿಗೆ ಕೊಂಡೊಯ್ದು ಕನ್ನಡ ಸಾಹಿತ್ಯ ಪರಿಷತ್ತಿಗೆ ಕೋಟಿ ಸದಸ್ಯರನ್ನು ನೋಂದಣಿ ಮಾಡಿಸಬೇಕೆಂಬ ಮಹತ್ವದ ಗುರಿ ನಮ್ಮದಾಗಿದೆ. ಪ್ರತಿಯೊಬ್ಬ ಕನ್ನಡಿಗರು ಸೇರಿ ತಾಯಿ ಕನ್ನಡಾಂಬೆಯ ತೇರನ್ನು ಎಳೆಯುತ್ತ. ಕನ್ನಡ ನಾಡು ನುಡಿ, ಭಾಷೆ ಸಂಸ್ಕೃತಿಯನ್ನು ದೇಶದ ಮೂಲೆ ಮೂಲೆಗೂ ಪರಿಚಯಿಸುವ ಕೆಲಸದಲ್ಲಿ ಸಾಹಿತ್ಯ ಪರಿಷತ್ತಿನ ಜೊತೆ ಕೈ ಜೋಡಿಸಬೇಕು ಎಂದು ಅವರು ಕರೆ ನೀಡಿದರು. ಇದಕ್ಕಾಗಿ ನಮ್ಮ ಜೊತೆ ಹೆಜ್ಜೆ ಹಾಕುವ ಎಲ್ಲ ಕನ್ನಡಿಗರಿಗೂ ಕನ್ನಡ ಸಾಹಿತ್ಯ ಪರಿಷತ್ತು ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತದೆ, ಭಾಷೆಯ ಉಚ್ಚಾರಣೆ, ಓದುವಿಕೆ ಮತ್ತು ಬರಹ ಮೂರರಲ್ಲೂ (ಮಾತಾಡುವಂತೆ ಬರೆಯುವ, ಬರೆಯುವಂತೆ ಓದುವ) ಸಾಮ್ಯತೆ ಇರುವ ಜಗತ್ತಿನ ಮೂರೇ ಮೂರು ಭಾಷೆಗಳಲ್ಲಿ ಕನ್ನಡವೂ ಒಂದು. ಉಳಿದೆರಡು ಸಂಸ್ಕೃತ ಮತ್ತು ಗ್ರೀಕ್ ಭಾಷೆಗಳು. ಹಾಗಾಗಿ ಕನ್ನಡ ಜಗತ್ತಿನಲ್ಲಿಯೇ ಕರಾರುವಾಕ್ಕಾದ ಭಾಷೆಯಾಗಿದೆ ಎನ್ನುವುದು ಹೆಮ್ಮೆಯ ವಿಷಯ ಎಂದರು. ಇವತ್ತು ದೆಹಲಿ ಘಟಕದ ಉದ್ಘಾಟನೆಯ ಸಂದರ್ಭದಲ್ಲಿ ಬಹಳ ಮಕ್ಕಳು, ಮಹಿಳೆಯರು ಕನ್ನಡ ಪದ್ಯಗಳನ್ನು ಹಾಡುವ, ವಾಚಿಸುವ ಮೂಲಕ ನೀಡಿದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೋಡಿ ನನಗೆ ಬಹಳ ಸಂತೋಷವಾಗಿದೆ. ಅಲ್ಲದೆ ಮಕ್ಕಳಿಗೆ ಮನೆಯಲ್ಲಿ ತಾಯಂದಿರೇ ಹೆಚ್ಚು ಸಮಯ ನೀಡಿ ಕಲಿಸುತ್ತಾರೆ. ಮಹಿಳೆಯರು ಮುಂದೆ ಬಂದು ಇಲ್ಲಿ ಕಾರ್ಯಕ್ರಮಗಳನ್ನು ನೀಡಿರುವುದರಿಂದ ಕನ್ನಡ ಭಾಷೆ ಉಳಿದು ಬೆಳೆಯುವುದರಲ್ಲಿ ನನಗೆ ಯಾವುದೇ ಸಂದೇಹ ಇಲ್ಲ. ಇದು ನಮ್ಮ ನೂತನ ಘಟಕದ ಆರಂಭದ ಶುಭ ಸಂಕೇತ ಎಂದರು.

ಅಲ್ಲದೇ, 2024ರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ದೆಹಲಿಯಲ್ಲಿ ನಡೆಸುವ ಇಚ್ಛೆ ಹೊಂದಿರುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಹಾವೇರಿಯಲ್ಲಿ ನವೆಂಬರ್ ತಿಂಗಳು ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದೆಹಲಿಯಿಂದ ಹೆಚ್ಚಿನ ಸಂಖ್ಯೆಯ ಕನ್ನಡಿಗರು ಭಾಗವಹಿಸುವಂತೆ ಮನವಿ ಮಾಡಿದರು.

ಉದ್ಘಾಟನಾ ಸಮಾರಂಭದಲ್ಲಿ ನೂತನ ಘಟಕದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಗೌರವ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಎನ್.ಪಿ. ಹಾಗೂ ಗೌರವ ಕೋಶಾಧ್ಯಕ್ಷ ಶ್ರೀ ಸಂತೋಷ ಜೆ. ಅವರಿಗೆ ಪದಾಧಿಕಾರಿಗಳಾಗಿ ನೇಮಕ ಮಾಡಿರುವ ಪತ್ರ ನೀಡಿದರು. ನಂತರ ಅಧ್ಯಕ್ಷರಾದ ಸಿ.ಎಂ. ನಾಗರಾಜ ಅವರಿಗೆ ಕನ್ನಡ ಬಾವುಟ ನೀಡಿ ದೆಹಲಿ ಕನ್ನಡ ಸಾಹಿತ್ಯ ಪರಿಷತ್ ಘಟಕದ ಅಧಿಕೃತ ಘೋಷಣೆ ಮಾಡಿ ದೆಹಲಿ ಘಟಕದ ಪದಾಧಿಕಾರಿಗಳಿಗೆ ಕನ್ನಡದ ಕೆಲಸವನ್ನು ಮಾಡಲು ದೊಡ್ಡ ಜವಾಬ್ದಾರಿ ನೀಡಲಾಗಿದ್ದು ಕನ್ನಡ ಕಟ್ಟುವ ಕೆಲಸವನ್ನು ಶ್ರದ್ಧೆ ಆಸಕ್ತಿ ವಹಿಸಿ ಮಾಡಬೇಕೆಂದು ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಗೌರವ ಕಾರ್ಯದರ್ಶಿ ಚಂದ್ರಶೇಖರ ಅವರು ನಿಮ್ಮ ನಿರೀಕ್ಷೆ ಹುಸಿಯಾಗದ ರೀತಿಯಲ್ಲಿ ನಾವು ಕನ್ನಡ ಸಾಹಿತ್ಯ ಪರಿಷತ್ತಿನ ಕೆಲಸಗಳನ್ನು ಕನ್ನಡ ಸೇವೆ ಎಂದು ತಿಳಿದು ಶ್ರದ್ಧೆ ನಿಷ್ಠೆಯಿಂದ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕವನ್ನು ದೀಪ ಬೆಳಗುವ ಮೂಲಕ ಉದ್ಘಾಟನೆ ಮಾಡಿದ ಮುಖ್ಯ ಅತಿಥಿ ದೆಹಲಿ ಸರ್ಕಾರದ ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿರುವ ಹಿರಿಯ ಐಎಎಸ್ ಅಧಿಕಾರಿ ಶ್ರೀ ಹೆಚ್. ರಾಜೇಶ್ ಪ್ರಸಾದ್ ಅವರು ಮಾತನಾಡಿ 1915ರಲ್ಲಿ ಮೈಸೂರಿನಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರಿಂದ ಪ್ರಾರಂಭವಾದ ಕನ್ನಡ ಸಾಹಿತ್ಯ ಪರಿಷತ್ತು 108 ವರ್ಷಗಳ ನಂತರ ದೆಹಲಿಯಲ್ಲಿ ತನ್ನ ಘಟಕವನ್ನು ತೆರೆಯುತ್ತಿದೆ. ಇಷ್ಟು ತಡವಾದರೂ ಸಹ ಇಂದು ರಾಷ್ಟ್ರ ರಾಜಧಾನಿಯಲ್ಲಿ ನಾಡೋಜ ಡಾ. ಮಹೇಶ ಜೋಶಿ ಅವರ ಪ್ರಯತ್ನದೊಂದಿಗೆ ಈ ಕಾರ್ಯ ನೆರವೇರಿದೆ. ಈ ಶುಭ ಸಂಧರ್ಭದಲ್ಲಿ ಭಾಗಿಯಾಗಿರುವುದು ನನಗೆ ಹೆಮ್ಮೆ ಎನಿಸುತ್ತಿದೆ ಎಂದು ನುಡಿದರು. 108 ವರ್ಷಗಳ ಹಿಂದೆ ಸಾಹಿತ್ಯ ಪರಿಷತ್ತು ಆರಂಭವಾದ ಕ್ಷಣವನ್ನೇ ಇಂದು ದೆಹಲಿಯಲ್ಲೂ ನಾವು ನೀವೆಲ್ಲ ಅನುಭವಿಸುತ್ತಿದ್ದೇವೆ, ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕಕ್ಕೆ ಚಾಲನೆ ಸಿಕ್ಕಿರುವ ಈ ಶುಭ ಸಂಜೆ ಸುವರ್ಣ ಅಕ್ಷರದಲ್ಲಿ ಬರೆದಿಡಬೇಕಾದ ಐತಿಹಾಸಿಕ ಕ್ಷಣ. ದೆಹಲಿಯಲ್ಲಿರುವ ಇತರೆ ದಕ್ಷಿಣ ಭಾರತೀಯರಂತೆ ನಾವು ನಮ್ಮ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು ಹಾಗೂ ಕನ್ನಡವನ್ನು ಹೆಚ್ಚು ಹೆಚ್ಚು ಬಳಸಿ ಕನ್ನಡ ಸಂಸ್ಕೃತಿ, ಕಲೆಗಳನ್ನು ಇನ್ನಷ್ಟು ಚೆನ್ನಾಗಿ ಪ್ರಚಾರ, ಪ್ರಸಾರಗೊಳಿಸಲು ಮುಂದಾಗಲು ಕರೆ ನೀಡಿದರು.

ಉಪಸ್ಥಿತರಿದ್ದ ಮತ್ತೊಬ್ಬ ಮುಖ್ಯ ಅತಿಥಿ ವಿದೇಶಾಂಗ ಇಲಾಖೆಯಲ್ಲಿ ಜಂಟಿ ಕಾರ್ಯದರ್ಶಿಯಾಗಿರುವ ಐಎಫ್ಎಸ್ ಅಧಿಕಾರಿ ಮಂಜುನಾಥ್ ಅವರು



ಕಾರ್ಯಕ್ರಮದಲ್ಲಿ ಪುಟ್ಟ ಬಾಲಕಿ ನೂತನ್ ಕೈಕಾಡೆ ವಾಚನ ಮಾಡಿದ ಕವಿ ಸಿದ್ದಯ್ಯ ಪುರಾಣಿಕರ ಏನಾದರೂ ಆಗು ಮೊದಲು ಮಾನವನಾಗು ಎಂಬ ಕವಿತೆಯನ್ನು ತಮ್ಮ ತಾಯಿಯವರು ಬಾಲ್ಯದಲ್ಲಿ ಕಲಿಸಿದ್ದನ್ನು, ಜೊತೆಗೆ ಅವರು ಕಲಿಸಿದ್ದ ಪುಣ್ಯಕೋಟಿ ಹಾಡನ್ನು ಸ್ಮರಿಸಿಕೊಂಡು ತಾಯ್ನುಡಿಯ ಹೃದಯಂಗಮ ಬೆಸುಗೆಯನ್ನು ಮೆಲುಕು ಹಾಕಿದರು. ಮತ್ತೊಬ್ಬ ಅತಿಥಿ ವಿದೇಶಾಂಗ ಇಲಾಖೆಯಲ್ಲಿ ಅಧೀನ ಕಾರ್ಯದರ್ಶಿಯಾಗಿರುವ ಡಾ. ನಿಖಿಲ್ ಅವರು ಮಾತನಾಡಿ ಇಂತಹ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಹೊರನಾಡಿನಲ್ಲಿ ಪ್ರತಿಬಿಂಬಿಸುವ ವೇದಿಕೆಯಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ ಹೊರಹೊಮ್ಮಲಿ ಎಂದು ಶುಭ ಕೋರಿದರು.

ಇನ್ನೊಬ್ಬ ಅತಿಥಿಗಳಾದ ವಿಶೇಷ ಕರ್ತವ್ಯಾಧಿಕಾರಿ (ಕೊರೊನಾ ಲಸಿಕೆ) ಶ್ರೀ ವೈಶಾಖ್ ನಾಗ್ ಅವರು ಮಾತನಾಡಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಆಸಕ್ತಿ ಅಭಿರುಚಿ ಬೆಳೆಸಿಕೊಂಡು ಇವತ್ತಿನ ಯುವ ಪೀಳಿಗೆಗೆ ಕನ್ನಡವನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಾದ ಗುರುತರ ಕಾರ್ಯವನ್ನು ಮಾಡುವಲ್ಲಿ ಈಗ ತಾನೇ ಮೊಳಕೆ ಹೊಡೆದಿರುವ ಕನ್ನಡ ಸಾಹಿತ್ಯ ಪರಿಷತ್‌ನ ದೆಹಲಿ ಘಟಕ ಹೆಮ್ಮರವಾಗಿ ಬೆಳೆಯಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ಅತಿಥಿ ಗಣ್ಯರು ಹಾಗೂ ಸಭಿಕರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿಯ ನೂತನ ಘಟಕದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿ ದೆಹಲಿಯಲ್ಲಿ ಕರ್ನಾಟಕ ಸಂಘದ ಮೂಲಕ ಈಗಾಗಲೇ ಮಾಡಿಕೊಂಡು ಬರುತ್ತಿರುವ ಕನ್ನಡದ ಕೆಲಸಗಳಿಗೆ ಇನ್ನಷ್ಟು ಬಲ ಬಂದಂತಾಗಿದ್ದು ಇದಕ್ಕೆ ಕಾರಣಕರ್ತರಾದ ಡಾ. ಮಹೇಶ ಜೋಶಿ ಅವರು ನಿಜಕ್ಕೂ ಒಬ್ಬ ದೂರದೃಷ್ಟಿಯುಳ್ಳ ನಾಯಕ ಎಂದು ಅವರು ತೆಗೆದುಕೊಂಡ ಈ ಐತಿಹಾಸಿಕ ನಿರ್ಧಾರವನ್ನು ಶ್ಲಾಘಿಸಿದರು.

ದೆಹಲಿಯ ಕನ್ನಡತಿಯರಾದ, ಶ್ರೀಮತಿ ಪೂಜಾ ರಾವ್, ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಶೋಭಾ ನಾಗರಾಜ್, ಶ್ರೀಮತಿ ಹೇಮಶ್ರೀ ಚಂದ್ರಶೇಖರ್, ಶ್ರೀಮತಿ ರೂಪಶ್ರೀ ನರಸಿಂಹ ಮೂರ್ತಿ, ಶ್ರೀಮತಿ ನೇತ್ರಕುಮಾರ್ ಮತ್ತು ಶ್ರೀಮತಿ ಲೀಲಾ ದೇವರಾಜ್‌ರುಗಳು ಸಮೂಹವಾಗಿ ಹಾಡಿದ ಕರ್ನಾಟಕದ ನಾಡಗೀತೆ ಗಾಯನದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಅನಂತರ ಇದೇ ಮಹಿಳೆಯರಿಂದ ಬಾರಿಸು ಕನ್ನಡ ಡಿಂಡಿಮ ಪದ್ಯ ಹಾಗೂ ದೆಹಲಿಯ ಸ್ಥಳೀಯ ಮಕ್ಕಳಾದ ಸಾತ್ವಿಕ್ ತೇಲಿ, ಹರ್ಷಿತಾ ಉಭಾಳೆ, ನಂದಿತಾ ಉಭಾಳೆ, ಮಹಮದ್ ಸಾಹಿಲ್, ಜೈನಬ್, ನೂತನ್ ಕೈಕಾಡೆ, ವಿಧಿ ಕೊಟಾರಿ, ವಿಧಾನ್ ಕೊಟಾರಿ ಮತ್ತು ಪುಟಾಣಿ ಶಾಶ್ವತ್ ಎಲ್ಲರೂ ಕನ್ನಡ ಕವಿಗಳ ಪದ್ಯಗಳನ್ನು ವಾಚನ ಮಾಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಗೌರವ ಕೋಶಾಧ್ಯಕ್ಷರಾದ ಶ್ರೀ ಸಂತೋಷ ಜೆ ಅವರು ವಂದನಾರ್ಪಣೆ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಉದ್ಘಾಟನೆಯಂತಹ ಅಮೃತ ಘಳಿಗೆಗೆ ದೆಹಲಿಯ ಹಿರಿಯ ಕನ್ನಡಿಗರು, ಅಧಿಕಾರಿಗಳು, ಮಹಿಳೆಯರು ಹಾಗೂ ಮಕ್ಕಳು ಸೇರಿದಂತೆ ನೂರಾರು ಕನ್ನಡಾಭಿಮಾನಿಗಳು ಸಾಕ್ಷಿಯಾದರು.

**ಅಭಿಮತ ವರದಿ**

### ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ವತಿಯಿಂದ ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯನವರ ಜಯಂತಿ-

## ನೂತನ ಘಟಕದಿಂದ ಮೊದಲ ಅರ್ಥಪೂರ್ಣ ಕಾರ್ಯಕ್ರಮ





ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಲ್ಲಿ ಪ್ರಧಾನ ಪಾತ್ರ ವಹಿಸಿದ್ದ, ಭಾರತ ದೇಶ ಕಂಡ ಅಪ್ರತಿಮ ಅಭಿಯಂತರರು ಆಗಿದ್ದ ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯನವರ ಜನ್ಮ ದಿನಾಚರಣೆಯನ್ನು ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಭವನದಲ್ಲಿ ಸೆಪ್ಟೆಂಬರ್ 15, ಗುರುವಾರ ಸಂಜೆ ಕನ್ನಡ ಸಾಹಿತ್ಯ ಪರಿಷತ್ತು ದೆಹಲಿ ಘಟಕದ ವತಿಯಿಂದ ಆಯೋಜಿಸಲಾಗಿತ್ತು. ಮೈಸೂರು ಸಂಸ್ಥಾನದ ದಿವಾನರು ಆಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಕೊಡುಗೆ ಮತ್ತು ಸೇವೆ ಅಗಾಧವಾದದ್ದು. ಹೀಗಾಗಿ ಪರಿಷತ್ತಿನ ದೆಹಲಿ ಘಟಕದಿಂದ ವಿಶ್ವೇಶ್ವರಯ್ಯನವರ 161ನೇ ಜನ್ಮ ಜಯಂತಿ ಹಾಗೂ ರಾಷ್ಟ್ರೀಯ ಅಭಿಯಂತರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಯೋಗ ವಿಜ್ಞಾನಿ ಹಾಗೂ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆಯ ನಿರ್ದೇಶಕರು ಆದ ಡಾ. ಈಶ್ವರ ವೀ. ಬಸವರೆಡ್ಡಿ ಅವರು ಮಾತನಾಡಿ ಸರ್.ಎಂ. ವಿಶ್ವೇಶ್ವರಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕ ಸದಸ್ಯರಾಗಿ ಅದರ ಬೆಳವಣಿಗೆಗೆ ಶ್ರಮ ವಹಿಸಿದವರು. ಸಾಹಿತ್ಯ ಸಂಸ್ಕೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ನಮ್ಮತನವನ್ನು ಗಟ್ಟಿಗೊಳಿಸುತ್ತದೆ. ದೆಹಲಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದರಿಂದ ಅದರ ಪ್ರಭಾವ ರಾಷ್ಟ್ರ ಮಟ್ಟದಲ್ಲಿ ಬೀರುತ್ತದೆ. ಹಾಗೆಯೇ ಸಂಘ ಮತ್ತು ಪರಿಷತ್ತು ನಡೆಸುವ ಇಂತಹ ಕಾರ್ಯಕ್ರಮಗಳಿಗೆ ತಾವು ತನು, ಮನ, ಧನಗಳನ್ನೂ ಅರ್ಪಿಸುವುದಾಗಿ ಹೇಳಿದರು. ಸರ್.ಎಂ.ವಿ. ಅವರು ಮೈಸೂರಿನ ದಿವಾನರಾಗಿ ನಾಡು-ನುಡಿ ದೇಶಕ್ಕಾಗಿ ಮಾಡಿರುವ ಕೆಲಸವನ್ನು ಯಾವುದೇ ಒಬ್ಬ ಮಂತ್ರಿಗಳು ಮಾಡಿರಲು ಸಾಧ್ಯವಿಲ್ಲ, ಕನ್ನಡ ನಾಡಿನ ದಿಗ್ಗಜರಾದ ಸರ್.ಎಂ.ವಿ., ಕುವೆಂಪು, ದ.ರಾ. ಬೇಂದ್ರೆ ಹಾಗೂ ಡಾ. ರಾಜ್‌ಕುಮಾರ್ ಅವರಂತಹ ಮಹಾನ್ ಪುರುಷರ ಜೀವನ ಇವತ್ತಿನ ಯುವಕರಿಗೆ ಸ್ಫೂರ್ತಿಯಾಗಿದೆ. ಅವರೆಲ್ಲ ಜೀವನದಲ್ಲಿ ಬಹಳ ಕಷ್ಟಪಟ್ಟು ಸಾಧನೆ ಮಾಡಿದವರು. ಒಬ್ಬ ಅಭಿಯಂತರರಾಗಿ ವಿಶ್ವೇಶ್ವರಯ್ಯನವರ ದೂರದೃಷ್ಟಿ ಬಹಳ ಅಗಾಧವಾಗಿತ್ತು ಹೀಗಾಗಿಯೇ ಅವರು ರೂಪಿಸಿ ಕೊಟ್ಟ ಯೋಜನೆಗಳು ಇವತ್ತಿಗೂ ಕೂಡ ನಮ್ಮ ಸಮಾಜದ ಪ್ರಗತಿಗೆ ಕೊಡುಗೆ ನೀಡುತ್ತಿವೆ. ಅಂತಹ ಮಹಾನ್ ವ್ಯಕ್ತಿತ್ವದ ನೆನಪಿಗೆ ದೆಹಲಿಯ ಕನ್ನಡ ಸಾಹಿತ್ಯ ಪರಿಷತ್ತು ಮಾಡುತ್ತಿರುವ ಈ ಕಾರ್ಯಕ್ರಮವು ಮುಂದಿನ ಹಲವು ವರ್ಷಗಳ ಕಾಲ ಜನರಿಗೆ ಸ್ಫೂರ್ತಿಯಾಗಿರುತ್ತದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಶ್ರೀ ಎಸ್. ಕೃಷ್ಣ ಭಟ್ ಅವರು ಮಾತನಾಡಿ ಮೈಸೂರು ಕರ್ನಾಟಕದ ಬಹುತೇಕ ಭಾಗದಲ್ಲಿ ಕೃಷಿ ಇವತ್ತು ಇಷ್ಟು ಬೆಳವಣಿಗೆ ಆಗಲು ಕಾರಣ ಸರ್.ಎಂ. ವಿಶ್ವೇಶ್ವರಯ್ಯನವರು ಮತ್ತು ಅವರು ನಿರ್ಮಿಸಿದ ಕೃಷ್ಣರಾಜ ಸಾಗರ ಆಣೆಕಟ್ಟು, ಬದುಕನ್ನು ಕಟ್ಟಿಕೊಳ್ಳಲು ಬೇಕಾದ ಮೂಲಭೂತ ಅವಶ್ಯಕಗಳನ್ನು ಅವರು ಒದಗಿಸಿದವರು. ಸರ್.ಎಂ.ವಿ. ಅವರದು ಕೇವಲ ಕನ್ನಡಿಗರಿಗೆ ಸೀಮಿತಗೊಂಡ ಹೆಸರಲ್ಲ ಅವರು ಹೈದರಾಬಾದ್, ಸೇರಿದಂತೆ ದೇಶದ ನಾನಾ ಭಾಗ ಮತ್ತು ವಿದೇಶಗಳಲ್ಲಿಯೂ ಸಹ ಸೇವೆ ನೀಡಿದ ಮಹಾನ್ ವ್ಯಕ್ತಿ ಮತ್ತು ಶ್ರೇಷ್ಠ ತಂತ್ರಜ್ಞರಾಗಿದ್ದರು. ಅವರ ಜೀವನ, ಶಿಸ್ತು ಇಂದು ನಮ್ಮ ಜೀವನಕ್ಕೆ ದೊಡ್ಡ ಪಾಠ, ಸ್ಫೂರ್ತಿ ನೀಡುತ್ತಿದೆ ಎಂದು ಸರ್. ಎಂ. ವಿಶ್ವೇಶ್ವರಯ್ಯನವರ ಆದರ್ಶ ಜೀವನದ ಬಗೆಗೆ ಹೇಳಿದರು.

ನವದೆಹಲಿಯ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಪ್ರೊ. ವಿಶ್ವನಾಥ್ ಅವರು ಮಾತನಾಡಿ ಸರ್.ಎಂ.ವಿ. ಕಟ್ಟಿದ ಕೆ.ಆರ್.ಎಸ್. ಆಣೆಕಟ್ಟಿನ ಪರಿಣಾಮವಾಗಿ ಮಂಡ್ಯ, ಮೈಸೂರು ಭಾಗದ ರೈತರು ಇಂದು ಆರ್ಥಿಕವಾಗಿ ಸಬಲರಾಗಿದ್ದಾರೆ. ನಮ್ಮ ಸಂಸ್ಕೃತಿ, ಭಾಷೆ, ಜೀವನವನ್ನು ಜಗತ್ತಿಗೆ ಹಂಚಿ ಕೇವಲ ಭಾರತರತ್ನವಾಗಷ್ಟೇ ಉಳಿಯಲಿಲ್ಲ, ಅವರು ಜಗತ್ತಿನ ರತ್ನವಾಗಿ ಬೆಳೆದರು ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀ ಎನ್.ಆರ್. ಶ್ರೀನಾಥ್ ಅವರು ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾಗಿ ಈಗಾಗಲೇ ನೂರ ಎಂಟು ವರ್ಷಗಳು ತುಂಬಿದ ನಂತರ ಅದು ದೆಹಲಿಗೆ ಬರಲು ಕಾರಣರಾದ ಶ್ರೀ ಸಿ.ಎಂ. ನಾಗರಾಜ್ ಮತ್ತು ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ಕನ್ನಡದವರಾದ ಸರ್. ಎಂ.ವಿ. ಅವರ ಸ್ಮರಿಸಲು ಕರ್ನಾಟಕ ಸಂಘದ ಬಳಿ ಇರುವ ಮೆಟ್ರೊ ನಿಲ್ದಾಣಕ್ಕೆ ಸರ್.ಎಂ.ವಿ. ಅವರ

ಹೆಸರನ್ನಿಟ್ಟಿದ್ದು ಒಳ್ಳೆಯ ಕೆಲಸ. ಬರುವ ದಿನಗಳಲ್ಲಿ ಅವರ ಸಾಧನೆಯಾಧಾರಿತ ಪುಸ್ತಕಗಳನ್ನು ಹೊರ ತಂದು ಉತ್ತರ ಭಾರತೀಯರಿಗೆ ಹಂಚುವ ಮೂಲಕ ಅರಿವು ಮೂಡಿಸುವ ಕೆಲಸವಾಗಬೇಕಾಗಿದೆ ಎಂದು ಮನವಿ ಮಾಡಿಕೊಂಡರು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಮಾತನಾಡಿ ಸರ್. ಎಂ.ವಿ. ಅವರ ಸಾಧನೆಯ ನೆನಪಿಗಾಗಿ ದೆಹಲಿಯಲ್ಲಿ ಮೆಟ್ರೋ ರೈಲು ನಿಲ್ದಾಣಕ್ಕೆ ಅವರ ಹೆಸರನ್ನು ಇಡಲಾಗಿದ್ದು ಅಲ್ಲಿ ಅವರ ಪ್ರತಿಮೆಯನ್ನು ಸ್ಥಾಪಿಸುವ ಮೂಲಕ ಅವರ ಸಾಧನೆಯ ಕುರಿತು ಜನರಿಗೆ ಅರಿವು ಮೂಡಿಸಬೇಕಾಗಿದೆ. ಇಷ್ಟು ವರ್ಷಗಳಾದರೂ ಸಹ ಯಾವುದೇ ತೊಂದರೆಯಿಲ್ಲದೇ ಕಾವೇರಿ ನದಿಯ ಮೇಲೆ ನಿಂತ ಕೆ.ಆರ್.ಎಸ್. ಆಣೆಕಟ್ಟನ್ನು ನಿರ್ಮಿಸಿದ ಪರಿ ಆಶ್ಚರ್ಯಕರವಾಗಿದೆ, ಅಂತಹ ಮಹಾನ್ ಜ್ಞಾನವನ್ನು ಹೊಂದಿದವರು ಸರ್. ಎಂ.ವಿ. ಎಂದು ಅವರ ಪ್ರತಿಭೆಯನ್ನು ಸ್ಮರಿಸಿಕೊಂಡರು. ಹಾಗೆಯೇ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದವರಲ್ಲಿ ಹಿರಿಯ ದೆಹಲಿ ಕನ್ನಡಿಗ ಶ್ರೀ ವಿ.ವಿ. ಬಿರಾದಾರ, ಸಂಘದ ಆಜೀವ ಸದಸ್ಯ ಶ್ರೀ ನರಸಿಂಹ ಮೂರ್ತಿ ಹಾಗು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಹಾಗು ಸಿವಿಲ್ ಅಭಿಯಂತರರಾದ ಶ್ರೀ ಕೆ.ಎಸ್. ಮೂರ್ತಿ ಅವರು ಮಾತನಾಡಿದರು.

ಅಧ್ಯಕ್ಷೀಯ ಭಾಷಣವನ್ನು ಮಾಡಿದ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ್ ಅವರು ಮಾತನಾಡಿ ದೆಹಲಿಗೆ ಬಂದ ಬಳಿಕ ಮೊದಲ ಬಾರಿಗೆ 2002ರಲ್ಲಿ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳ ಸ್ಥಾನದಲ್ಲಿ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿ ಬಂದು ಇವತ್ತು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾಗಿದ್ದು, ಇದಕ್ಕೆ ಸ್ಫೂರ್ತಿಯಾಗಿ ಸಂಘದ ಹಿರಿಯರಾದ ಶ್ರೀ ಕೃಷ್ಣ ಭಟ್ ಅವರ ಮಾರ್ಗದರ್ಶನ ಮತ್ತು ಸಹಕಾರವಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ ಸ್ಥಾಪನೆಯಾದ ಬಳಿಕ ಸರ್. ಎಂ.ವಿ. ಅವರ ಜಯಂತಿ ಮೊದಲ ಕಾರ್ಯಕ್ರಮವಾಗುತ್ತಿರುವುದು ನಮ್ಮ ಸೌಭಾಗ್ಯವಾಗಿದೆ. ದೆಹಲಿ ಕನ್ನಡದ ಮಕ್ಕಳು ಇಂದು ಕನ್ನಡದಲ್ಲೇ ಬರೆದುಕೊಂಡು ಬಂದು ಕನ್ನಡದಲ್ಲೆ ಓದುವುದನ್ನು ನೋಡಿದರೆ ಕನ್ನಡದ ಬಗೆಗೆ ಹಾಗೂ ಅವರ ಪಾಲಕರ ಬಗೆಗೆ ಹೆಮ್ಮೆಯಾಗುತ್ತದೆ. ಸ್ವಂತ ಪರಿಶ್ರಮ ಮತ್ತು ಗುರುವಿನ ಆಶೀರ್ವಾದದಿಂದ ಸರ್. ಎಂ.ವಿ. ಅವರು ವಿಶ್ವಮಾನವರಾಗಿ ಗುರುತಿಸಿಕೊಂಡಿದ್ದಾರೆ. ಸರ್. ಎಂ.ವಿ. ಅವರು ಭಾರತ ರತ್ನ ಪ್ರಶಸ್ತಿ ಪಡೆದ ಮೊದಲ ಕನ್ನಡಿಗರಾಗಿದ್ದು, ಅವರ ಬದುಕಿನ ಶಿಸ್ತು ಮತ್ತು ಸರಳತೆ ಆಗಿನ ಕಾಲದಲ್ಲಿ ಬಹಳ ಜನರ ದೊಡ್ಡ ವ್ಯಕ್ತಿತ್ವಗಳಿಗೆ ಸ್ಫೂರ್ತಿಯಾಗಿತ್ತು. ಬರುವ ದಿನಗಳಲ್ಲಿ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ ಇನ್ನು ಹೆಚ್ಚು ಕೆಲಸ ಮಾಡಲಿದ್ದು, ದೆಹಲಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲು ಈಗಾಗಲೇ ಕಸಾಪ ಅಧ್ಯಕ್ಷರಾದ ಡಾ. ಮಹೇಶ ಜೋಶಿ ಅವರು ಸಮ್ಮತಿಸಿದ್ದು, ಐವತ್ತಾರು ವರ್ಷಗಳ ಬಳಿಕ ಮತ್ತೆ ದೆಹಲಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಎಲ್ಲ ಏರ್ಪಾಡುಗಳು ಆಗುತ್ತಿವೆ. ನಾವು ನಮ್ಮ ಮಕ್ಕಳಿಗೆ ಕನ್ನಡವನ್ನು ಕಲಿಸಬೇಕಾಗಿದೆ, ಉಳಿಸಬೇಕಾಗಿದೆ ಎಂದು ಕನ್ನಡದ ಪರ ತಮ್ಮ ಒಲವನ್ನು ವ್ಯಕ್ತಪಡಿಸಿದರು.

ಸುಮಾರು ಮೂರು ಗಂಟೆಗಳ ಕಾಲ ನಡೆದ ಸುಂದರ ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಮಕ್ಕಳಾದ ಕಾರ್ತಿಕ್ ಆಚಾರ್ಯ, ಅಂಕಿತಾ ಲದ್ದೆ, ಎಲಿಶಾ, ವಿಧಿ ಮತ್ತು ವಿಧಾನ್ ಕೊಠಾರಿ, ಶ್ರೀಕಾಂತ್ ಕಾಳೆ, ಸಾತ್ವಿಕ್ ಮತ್ತು ಶ್ರೇಯಾ ಕನ್ನಡ ಪದ್ಯಗಳನ್ನು ಗಾಯನ ಮಾಡಿದರು. ಪರಿಷತ್ತಿನ ಗೌರವ ಕೋಶಾಧ್ಯಕ್ಷರಾದಂತಹ ಸಂತೋಷ್ ಜೆ ಅವರು ಅತಿಥಿಗಳನ್ನು ಸ್ವಾಗತಿಸಿದರೆ, ಗೌರವ ಕಾರ್ಯದರ್ಶಿಗಳಾದ ಶ್ರೀ ಎನ್.ಪಿ. ಚಂದ್ರಶೇಖರ್ ಅವರು ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿ ವಂದನಾರ್ಪಣೆ ಅರ್ಪಿಸಿದರು.

**ಯಲ್ಲಾಲಿಂಗ ಕೊಪ್ಪದ**

# ದೆಹಲಿಯಲ್ಲಿದ್ದು ತಾಯ್ನಾಡಿಗೆ ಹಿಂದಿರುಗಿದ ಪ್ರೊಫೆಸರ್ ಸಖಾರಾಮ ಉಪ್ಪೂರು ಅವರು ಇಂದು ತೀರಾ ಹಿಂದುಳಿದ ಜನಾಂಗದ, ಕಾಡಿನಂಚಿನಲ್ಲಿನ ವಂಚಿತ ಸಮುದಾಯದ ಮಕ್ಕಳಿಗೆ ಆಶಾಕಿರಣವಾಗಿದ್ದಾರೆ



ಶ್ರೀಯುತ ಸಖಾರಾಮ ಉಪ್ಪೂರರು ದೆಹಲಿ ಕನ್ನಡಿಗರಾಗಿದ್ದು, ಸುಮಾರು ಮೂವತ್ತಕ್ಕೂ ಹೆಚ್ಚು ವರ್ಷ ದೆಹಲಿಯಲ್ಲಿ ವಾಸಿಸಿ, ಸರ್ಕಾರಿ ಸೇವೆಯಿಂದ ನಿವೃತ್ತಿಯಾದ ನಂತರ ಕರ್ನಾಟಕಕ್ಕೆ ತೆರಳಿ ಉಡುಪಿ ಜಿಲ್ಲೆಯ ಬ್ರಹ್ಮಾವರ ವಲಯದಲ್ಲಿ ಇದ್ದುಕೊಂಡು ಬಡಕುಟುಂಬಗಳು ಹಾಗೂ ಕಾಡಿನ ಹಿಂದುಳಿದ ಜನಗಳೇ ಹೆಚ್ಚಾಗಿರುವ ಮುಂಡಾಡಿ, ಕಾಡೂರು, ನಡೂರು ಹಾಗೂ ಅಕ್ಕಪಕ್ಕದ ಸುಮಾರು 25 ಹಳ್ಳಿಗಳ ಜನರಿಗೆ ಹಾಗೂ ಅವರ ಮಕ್ಕಳಿಗೆ, ತಮ್ಮ ಮುಂದಿನ ಜೀವನವನ್ನು ಸಮರ್ಪಿಸಿದ್ದಾರೆ. ಶ್ರೀವಾಣಿ ಪ್ರೌಢಶಾಲೆ, ನಡೂರು, ಮತ್ತು ವಿಶ್ವ ಜ್ಞಾನ ಅನುದಾನಿತ ಖಾಸಗಿ ಹಿರಿಯ ಪ್ರಾಥಮಿಕ ಶಾಲೆ ಮುಂಡಾಡಿಯಲ್ಲಿ ಯಾವುದೇ ಪ್ರತಿಫಲ ಅಪೇಕ್ಷೆ ಇಲ್ಲದೆ ನಿಸ್ವಾರ್ಥವಾಗಿ ಸ್ವ ಇಚ್ಛೆಯಿಂದ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದಿ. ಶಿವರಾಮ ಶೆಟ್ಟಿ ನಡೂರು, ನಿವೃತ್ತ ಶಿಕ್ಷಕರೊಬ್ಬರಾಗಿದ್ದವರ ಪ್ರಯತ್ನದಿಂದ 1984ರಲ್ಲಿ ಸ್ಥಾಪಿಸಲ್ಪಟ್ಟ ಈ ಎರಡು ಶಾಲೆಗಳನ್ನು ಇತ್ತೀಚಿಗೆ ಜೀರ್ಣೋದ್ಧಾರ ಮಾಡಿಸಿರುವುದು ನಿಜಕ್ಕೂ ಶ್ಲಾಘನೀಯ. ಯಾವುದೇ ಆಧುನಿಕ ಸೌಲಭ್ಯ ಸಂಪರ್ಕ ಹಾಗೂ ಸವಲತ್ತುಗಳು ಇಲ್ಲದಿರುವ ಕಾಡಿನ ಮಧ್ಯೆ ಇರುವ ಸುಮಾರು 20–25 ಕಿ.ಮೀಟರ್ ಆಸುಪಾಸಿನ ಎಲ್ಲಾ ಹಳ್ಳಿಗಳಿಂದ ಮಕ್ಕಳು ಶಾಲೆಗೆ ಬಂದು ಹೋಗುವುದಕ್ಕೆ ನೆರವಾಗುವಂತೆ ಎರಡು ಬಸ್ಸುಗಳನ್ನು ದೇಣಿಗೆಯಾಗಿ ತರುವಲ್ಲಿ ಯಶಸ್ವಿಯಾಗಿದ್ದಾರೆ.

> **ರಾಷ್ಟ್ರ ರಾಜಧಾನಿಯಲ್ಲಿ ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಶಾಲೆಗಳ ಅಭಿವೃದ್ಧಿಗೆ ಶ್ರಮಿಸಿದ ಪ್ರೊಫೆಸರ್ ಸಖಾರಾಮ ಉಪ್ಪೂರು ಅವರು ಒಮ್ಮೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದರು. ಆದರೆ ಕೆಲವೇ ಮತಗಳಿಂದ ಸೋತಿದ್ದರು. ಆದರೆ ಇಂದು ಹಿಂದುಳಿದ ಜನಾಂಗದ ಬಡ ಮಕ್ಕಳಿಗೆ ಆಶ್ರಯದಾತರಾಗಿ ನಿಂತಿರುವ ಇವರು ನಿಜವಾಗಿಯೂ ಜೀವನದಲ್ಲಿ ಗೆದ್ದಿದ್ದಾರೆ. ಆ ಕಾಡಿನ ಮಕ್ಕಳಿಗೆ ಆಶಾಕಿರಣವಾಗಿದ್ದಾರೆ. ಸ್ವಂತ ಜೀವನದ ದೊಡ್ಡ ಕೆಲಸ ಜವಾಬ್ದಾರಿಗಳನ್ನು ಬಿಟ್ಟು, ತಮ್ಮ ಕುಟುಂಬವನ್ನು ಬಿಟ್ಟು ಸಮಾಜಕ್ಕೆ ತಮ್ಮನ್ನು ತಾವೇ ಮುಡುಪಿಟ್ಟಿರುವ ಪ್ರೊಫೆಸರ್‌ಗೆ ಕೋಟಿ ಕೋಟಿ ನಮನ. ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.**
>
> **ಸಿ.ಎಂ. ನಾಗರಾಜ**
> ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ

ಜೊತೆಗೆ ಸುತ್ತಲಿನ ಗ್ರಾಮಗಳ ಬಡ ಜನರ ಆಶೋತ್ತರಗಳಿಗೆ ಸ್ಪಂದಿಸಿ ಅಲ್ಲಿನ ಪರಿಸರ, ಅವರ ಸಂಸ್ಕೃತಿ, ಸಂಪ್ರದಾಯ, ಪದ್ಧತಿಗಳನ್ನು ಉಳಿಸುವಲ್ಲಿ ಹಾಗೂ ಬೆಳೆಸುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕುಟುಂಬಗಳ ಹಾಗೂ ಅಲ್ಲಿನ ಬಡ ಮಕ್ಕಳ ಶಿಕ್ಷಣಕ್ಕಾಗಿ, ಆರೋಗ್ಯಕ್ಕಾಗಿ, ಸರ್ವಾಂಗೀಣ ಏಳಿಗೆಗಾಗಿ ಹಗಲು ರಾತ್ರಿ ಶ್ರಮಿಸುತ್ತಿದ್ದಾರೆ.

ತಮ್ಮ ಜೊತೆಗೆ ಕೆಲವರನ್ನು ಸೇರಿಸಿಕೊಂಡು, ಸಂಘ ಸಂಸ್ಥೆಗಳ ಹಾಗೂ ದಾನಿಗಳನ್ನು ಸಂಪರ್ಕಿಸಿ ಎರಡು ಶಾಲೆಗಳು ಅನುದಾನಿತವಾಗಿದ್ದರೂ ಬದಲಾದ ಸರ್ಕಾರದ ನಿಯಮಗಳ ಪರಿಣಾಮವಾಗಿ ಹೆಚ್ಚು ಸೌಕರ್ಯಗಳು ಸವಲತ್ತುಗಳು ಸರ್ಕಾರದಿಂದ ದೊರೆಯದಿರುವುದರಿಂದ ಎಲ್ಲದಕ್ಕೂ ದಾನಿಗಳ ನೆರವನ್ನು ಪಡೆದು ಮಕ್ಕಳಿಗೆ ಉಚಿತ ಸಮವಸ್ತ್ರ, ಬ್ಯಾಗು, ನೋಟ್ ಬುಕ್, ಪಠ್ಯ ಪುಸ್ತಕ, ಬಿಸಿಯೂಟ ಮುಂತಾದವುಗಳನ್ನು ಎಲ್ಲಾ ಮಕ್ಕಳಿಗೂ ಸಿಗುವಂತೆ ನೋಡಿಕೊಳ್ಳುತ್ತಿದ್ದಾರೆ.

ಎರಡೂ ಶಾಲೆಗಳಲ್ಲಿ ಹೂದೋಟ ಮತ್ತು ತರಕಾರಿಗಳನ್ನು ಇವರ ಹಾಗೂ ಶಿಕ್ಷಕರ ಮಾರ್ಗದರ್ಶನದಲ್ಲಿ ಮಕ್ಕಳೇ ಬೆಳೆದು ಕಾಯಿಪಲ್ಯಗಳನ್ನು ಮಧ್ಯಾಹ್ನದ ಊಟಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಮಕ್ಕಳನ್ನು ಹೆಚ್ಚು ಕಾಡುತ್ತಿರುವ ಪೌಷ್ಠಿಕಾಂಶದ ಕೊರತೆ (ಅಪೌಷ್ಠಿಕತೆ) ನೀಗಿಸಲು ವಾರಕ್ಕೆ ಎರಡು ಸಲ ಮೊಟ್ಟೆ ಕೊಡಿಸುವತ್ತ ಗಮನ ನೀಡುತ್ತಿದ್ದಾರೆ. ಆಟೋಟ, ಸಂಗೀತ ಮೊದಲಾದ ಸ್ಪರ್ಧೆಗಳಲ್ಲಿ ಮತ್ತು ಇತರೆ ಸಂಘ ಸಂಸ್ಥೆಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ



ಪಾಲ್ಗೊಳ್ಳುವಂತೆ ಮಕ್ಕಳನ್ನು ಪ್ರೋತ್ಸಾಹಿಸಿ ಮಕ್ಕಳ ಆತ್ಮವಿಶ್ವಾಸ ಕೂಡ ಹೆಚ್ಚಾಗುವಂತೆ ಮಾಡಿದ್ದಾರೆ. ಸಾಮಾನ್ಯ ಶಿಕ್ಷಣದ ಜೊತೆ, ಕಂಪ್ಯೂಟರ್ ಎಜುಕೇಶನ್ ಕೊಡಿಸಲು ಉಳ್ಳವರಿಂದ ಹಾಗೂ ದಾನಿಗಳಿಂದ ಬೇಡಿ ಸುಮಾರು 27 ಕಂಪ್ಯೂಟರ್‌ಗಳನ್ನು ತಂದು ತರಬೇತಿದಾರರನ್ನು ನೇಮಿಸಿ ಶಾಲಾ ಮಕ್ಕಳಿಗೆ ತರಬೇತಿ ನೀಡುತ್ತಿದ್ದಾರೆ. ಮಕ್ಕಳ ಅನುಕೂಲಕ್ಕಾಗಿ ದಾನಿಗಳಿಂದ ನೆರವು ಪಡೆದು ಇಂಗ್ಲಿಷ್ ಸ್ಪೀಕಿಂಗ್ ಸ್ಕಿಲ್ ಕೂಡ ನಡೆಸುತ್ತಿದ್ದು ಮಕ್ಕಳನ್ನು ಆತ್ಮ ನಿರ್ಭರರನ್ನಾಗಿ ಮಾಡುವ ದೆಸೆಯಲ್ಲಿ ಮುನ್ನಡೆಯುತ್ತಿದ್ದಾರೆ. ಇದರಿಂದ 10 ಅಥವಾ 12ನೇ ತರಗತಿಯ ನಂತರ ತಕ್ಷಣ ಉದ್ಯೋಗ ಪಡೆದುಕೊಳ್ಳುವಲ್ಲಿ ಮಕ್ಕಳಿಗೆ ಅನುಕೂಲವಾಗಬೇಕೆಂಬ ಉದ್ದೇಶವಿಟ್ಟುಕೊಂಡು ಅವರಿಗೆ ಉದ್ಯೋಗ ಮಾಹಿತಿಗಳನ್ನು ಕೂಡಾ ಒದಗಿಸುತ್ತಾ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ.

ಈ ಎರಡು ಶಾಲೆಗಳಲ್ಲಿ ಒಟ್ಟು 14 ಅನಾಥ ಮಕ್ಕಳು ಸಹ ಓದುತ್ತಿದ್ದಾರೆ ಅವರ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸುತ್ತಿದ್ದು, ಕೊರೊನ ಕಾಲದಲ್ಲಿ ಮಕ್ಕಳಿಗೆ ಆನ್‌ಲೈನ್ ಕ್ಲಾಸ್‌ಗೆ ಅನುಕೂಲವಾಗುವಂತೆ ಮೊಬೈಲ್ ಫೋನ್‌ನ ವ್ಯವಸ್ಥೆ ಕೂಡ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಅಲ್ಲೇ ಪಕ್ಕದ ಕಾಡಿನಲ್ಲಿರುವ ದೇವಸ್ಥಾನದಲ್ಲಿ ವಾಸವಿದ್ದುಕೊಂಡು ಅಲ್ಲಿನ ಸ್ಥಳೀಯ ಬಡಜನರ ಮದುವೆ, ನಿಶ್ಚಿತಾರ್ಥ, ಸೀಮಂತೋತ್ಸವ, ವೈಕುಂಠ ಸಮಾರಾಧನೆ ಮುಂತಾದ ಕಾರ್ಯಕ್ರಮಗಳನ್ನು ಮಾಡಿಸುವಲ್ಲಿ ತೀರ ಕಡಿಮೆ ಖರ್ಚಿನಲ್ಲಿ ನೆರವೇರಿಸುವಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಅಲ್ಲಿ ಯಾವುದೇ ಆಡಂಬರವಿಲ್ಲದೆ, ಸರಳವಾಗಿ ಬಡವ, ಬಲ್ಲಿದ ಮೇಲು ಕೀಳು ಎಂಬ ಯಾವುದೇ ನಿರ್ಬಂಧ ವಿಲ್ಲದೆ ಎಲ್ಲಾ ಜನರು ಸಮಾನತೆಯಿಂದ ಜಾತಿಯ ಭೇದವಿಲ್ಲದೆ ಕಾರ್ಯಕ್ರಮ ಮಾಡುವಲ್ಲಿ, ಜೀವನ ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಹಾಗೂ ಸಾಧ್ಯವಾದಷ್ಟು ಸ್ಥಳೀಯರಿಗೆ ಕೆಲಸ ಸಿಗುವಂತೆ ಮಾಡುತ್ತಿದ್ದಾರೆ.

ಇಲ್ಲಿನ "ಕುಡುಬಿ" ಜನಗಳು ಮೂಲತಃ ಕರ್ನಾಟಕದಲ್ಲಿ ಓ.ಬಿ.ಸಿ ಗುಂಪಿಗೆ ಸೇರಿದವರಾಗಿದ್ದಾರೆ. ಇಲ್ಲಿನ ಪುರುಷರು ದುಡಿದ ಹಣದಿಂದ ದಿನಾಲು ಮದ್ಯಪಾನ ಮಾಡಿ, ಬೇಜವಾಬ್ದಾರರಾಗಿರುತ್ತಾರೆ. ಮಕ್ಕಳ ಶಿಕ್ಷಣದ ಬಗ್ಗೆಯೂ ಇವರಿಗೆ ಕಾಳಜಿ ಇಲ್ಲ. ಇಲ್ಲಿನ ತಾಯಂದಿರು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಗಮನ ನೀಡಬೇಕಾಗುತ್ತದೆ. ಮಕ್ಕಳಿಗೆ ಉಚಿತ ಬಟ್ಟೆ, ಪುಸ್ತಕ, ಊಟ ಇತ್ಯಾದಿಗಳನ್ನು ನೀಡಿ ಶಾಲೆಗೆ ತರಬೇಕಾದ ಪರಿಸ್ಥಿತಿ ಇದೆ, ಬೆಳಗ್ಗೆ 9.30 ರಿಂದ ಸಂಜೆ 4:30ರ ವರೆಗೆ ಶಾಲೆಯಲ್ಲಿ ಪಾಠ ಮಾಡುವ ಇವರು ಸಂಜೆ ಐದರಿಂದ ಏಳರವರೆಗೆ ದೇವಸ್ಥಾನದಲ್ಲಿ ಇದ್ದುಕೊಂಡು ಎರಡು ಶಾಲೆಯ ಮಕ್ಕಳಲ್ಲದೆ ಬೇರೆಯ ಶಾಲೆಯ ಮಕ್ಕಳಿಗೂ ಕೂಡ ಉಚಿತವಾಗಿ ಟ್ಯೂಷನ್ ಹೇಳಿ ಕೊಡುತ್ತಿದ್ದಾರೆ. ನಂತರ ಭಜನೆ, ಆಮೇಲೆ ನಿದ್ದೆಗೆ ಜಾರುವ ಇವರ ದಿನಚರಿಯವೂ ಮುಂಜಾನೆ 5.30ಕ್ಕೆ ಪ್ರಾರಂಭವಾಗಿ ರಾತ್ರಿ 9 ರವರೆಗೆ ನಡೆಯುತ್ತಿದ್ದು ಕೇವಲ ಎರಡು ಹೊತ್ತಿನ ಊಟಕ್ಕೆ ತಮ್ಮನ್ನು ಸೀಮಿತ ಮಾಡಿಕೊಂಡ ಸರಳತೆಯ ಸಾಕಾರ ಮೂರ್ತಿ ಪ್ರೊ. ಉಪ್ಪೂರರು ಆಗಿದ್ದಾರೆ.

ಇದಲ್ಲದೆ, ಇಲ್ಲಿನ ಸ್ಥಳೀಯ ಪದ್ಧತಿಯಂತೆ "ಸರ್ಪ ಸಂಸ್ಕಾರ" ಅನ್ನುವ ಪದ್ಧತಿ ಇದ್ದು ಮೃತಪಟ್ಟ ನಾಗರಹಾವನ್ನು ಇಲ್ಲಿ ವಿಧಿ ವಿಧಾನದಿಂದ ಪುರೋಹಿತ್ಯದೊಂದಿಗೆ ಸಂಸ್ಕಾರ ಮಾಡುವ ಪದ್ಧತಿ ಇದ್ದು ಪ್ರತಿ ಸಂಸ್ಕಾರ ಕಾರ್ಯಕ್ರಮಕ್ಕೆ ಸುಮಾರು 25–30 ಸಾವಿರ ಖರ್ಚು ಬರುತ್ತಿತ್ತು. ಬಡ ಜನರಿಗೆ ತುಂಬಾ ಕಷ್ಟವಾಗುತ್ತಿತ್ತು ಏಕೆಂದರೆ ಅವರ ಶ್ರದ್ಧೆಯ ಪ್ರಕಾರ ವಿಧಿ ವಿಧಾನದಿಂದ ಸಂಸ್ಕಾರ ಮಾಡದಿದ್ದರೆ ಅವರ ಮದುವೆಗೆ, ಮಕ್ಕಳಿಗೆ, ಮನೆಗೆ ಹಾಗೂ ಅವರ ಕೆಲಸಗಳಿಗೆ ಮತ್ತು ಆರೋಗ್ಯಕ್ಕೆ (ಕಂಟಕ) ತೊಂದರೆಯಾಗುತ್ತದೆ ಎಂಬ ನಂಬಿಕೆ ಇರುವುದರಿಂದ ಮಾಡಲೇಬೇಕಾದ ಅನಿವಾರ್ಯತೆಯಿತ್ತು. ಇದನ್ನು ಅರಿತ ಪ್ರೊ. ಸಖಾರಾಮ ಉಪ್ಪೂರು ಅವರು, ಒಟ್ಟಿಗೆ 70 ಕುಟುಂಬಗಳನ್ನು ಸೇರಿಸಿ ಸಾರ್ವಜನಿಕ ಸರ್ಪ ಸಂಸ್ಕಾರ ಮಾಡುವ ಪದ್ಧತಿಯನ್ನು ಪ್ರಾರಂಭಿಸಿ ಸ್ಥಳೀಯರಿಗೆ ಕೇವಲ–2,000 ರೂಗಳಲ್ಲಿ ಸರ್ಪ ಸಂಸ್ಕಾರವಾಗುವಂತೆ ಅನುಕೂಲ ಮಾಡಿಕೊಟ್ಟಿದ್ದಾರೆ. ವರ್ಷಕ್ಕೆ ಈ ರೀತಿ ಎರಡು ಸಲ ಸರ್ಪ ಸಂಸ್ಕಾರ ಮಾಡುವ ಕಾರ್ಯಕ್ರಮ ಇಟ್ಟುಕೊಳ್ಳುತ್ತಿದ್ದಾರೆ. ಜನರ ಆರ್ಥಿಕ ನಷ್ಟವನ್ನು ನಿಲ್ಲಿಸಿದ್ದಾರೆ. ಇವರ ಪ್ರಕಾರ ಕರ್ನಾಟಕ ಬ್ಯಾಂಕ್, ಧರ್ಮಸ್ಥಳದ ಸಂಸ್ಥೆ ಹಾಗೂ ಅನೇಕ ಸಂಘ ಸಂಸ್ಥೆಗಳು ಮತ್ತು ದಾನಿಗಳು ಇವರ ಜೊತೆ ಕೈಗೂಡಿಸಿದರೂ ಕೂಡ ಇನ್ನೂ ಬಹಳ ಹಣದ ಅವಶ್ಯಕತೆ ಇದೆ. ಪ್ರಾಥಮಿಕ ಶಾಲೆಯ ಕಾಂಪೌಂಡ್ ಮಾಡಲು ಸುಮಾರು 3 ಲಕ್ಷ ರೂಪಾಯಿಗಳ ಅವಶ್ಯಕತೆ ಇದೆ ಹಾಗೂ ವರ್ಷದ 248 ಶಾಲೆಯ ದಿನಗಳಲ್ಲಿ, ಶಾಲೆಯ ರಜಾ ದಿನಗಳನ್ನು ಹೊರತುಪಡಿಸಿ, ಪ್ರತಿದಿನ ರೂ.7000 ಖರ್ಚು ಬರುವುದು. ಎರಡು ಬಸ್ಸಿನ ಡ್ರೈವರ್‌ಗಳು, ಹೆಲ್ಪರುಗಳು, ಡೀಸೆಲ್ ನಿರ್ವಹಣೆಯ ಖರ್ಚುಗಳು ಹಾಗೂ ನಾಲ್ಕಾರು ಮಂದಿ ಗೌರವ ಅಧ್ಯಾಪಕರ ಸಂಭಾವನೆ ಇದ್ದು ಪ್ರತಿದಿನ ಹಣದ ಅವಶ್ಯಕತೆ ಇದೆ ಎಂದು ತಿಳಿದು ಬಂದಿದೆ.



ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರವರು ಉಡುಪಿಗೆ ಭೇಟಿ ಕೊಟ್ಟಾಗ ಇವರ ಶಾಲೆಗಳಿಗೂ ಕೂಡ ಭೇಟಿ ನೀಡಿ ಇವರ ನಿಸ್ವಾರ್ಥ ಸೇವೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ನನಗೆ ತಿಳಿಸಿದರು. ನನಗೂ ಆಶ್ಚರ್ಯವಾಗಿ, ಕುತೂಹಲದಿಂದ ಪ್ರೊಫೆಸರ್ ಅವರನ್ನು ಸಂಪರ್ಕಿಸಿದಾಗ ಅವರು ಸಂಕೋಚದಿಂದ ನಾನು ಅಂತ ಯಾವ ದೊಡ್ಡ ಕೆಲಸ ಮಾಡುತ್ತಿಲ್ಲ ಎಂದರು. ನಾನು ಬಹಳ ವಿನಂತಿಸಿಕೊಂಡಾಗ ಅವರು ಸವಿವರವಾಗಿ ಮಾತಾಡಿದರು. ಅಲ್ಲಿನ ಹಳ್ಳಿಗಾಡಿನ ಕೂಲಿ ಕಾರ್ಮಿಕರ ಹಾಗೂ ಹಿಂದುಳಿದ ಜನಾಂಗದ ಮಕ್ಕಳ ಶಿಕ್ಷಣದ ಬಗ್ಗೆ ಮಕ್ಕಳ ಪೌಷ್ಟಿಕತೆಯ ಬಗ್ಗೆ ಹಾಗೂ ಅವರ ಭವಿಷ್ಯದ ಬಗ್ಗೆ ಅವರಲ್ಲಿರುವ ಕಾಳಜಿ ನಿಜಕ್ಕೂ ಶ್ಲಾಘನೀಯ. ಇಂತಹ ಕುಗ್ರಾಮಗಳಲ್ಲಿ ಇದ್ದುಕೊಂಡು, ಜನತೆಯ ಹಾಗೂ ಮಕ್ಕಳ ಏಳಿಗೆಗಾಗಿ ಶ್ರಮಿಸುತ್ತಿದ್ದು, ತಮ್ಮನ್ನು ತಾವು ಮುಡುಪಾಗಿಟ್ಟು, ಜೀವನದಲ್ಲಿ ಸಾರ್ಥಕತೆಯನ್ನು ಮೆರೆದಿದ್ದಾರೆ. ಎಲೆಮರೆಕಾಯಿಯಂತೆ ಪ್ರಚಾರದಿಂದ ದೂರ ಉಳಿದು, ಅಕ್ಷರ ಹಾಗೂ ಅನ್ನದಾಸೋಹದಲ್ಲಿ ತಮ್ಮನ್ನು ಮುಡುಪಾಗಿಟ್ಟಿರುವ ಅವರು ನಿಜಕ್ಕೂ ನಮ್ಮೆಲ್ಲರಿಗೂ ಮಾದರಿಯಾಗಿದ್ದಾರೆ ಎಂದರೆ ತಪ್ಪಾಗಲಾರದು. ಹೀಗೆ ಇನ್ನೂ ಹೆಚ್ಚಿನ ಸಮಾಜ ಮುಖಿ ಕಾರ್ಯಗಳನ್ನು ಮುಂದುವರಿಸಲಿ ಎಂದು ಹಾರೈಸುತ್ತಾ ಅವರಿಗೆ ಹೃದಯಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇನೆ.

**ಎಂ.ಬಿ. ವಸಂತ್ ಕುಮಾರ್**
ದೆ.ಕ.ಸಂಘದ ಅಜೀವ ಸದಸ್ಯರು ಹಾಗೂ
ದೆಹಲಿ ಪೊಲೀಸ್ ಅಧಿಕಾರಿ


# ಸಂಘದ ಸಂಘರ್ಷ

ದೆಹಲಿ ಕರ್ನಾಟಕ ಸಂಘದ ಸಂಘರ್ಷ– ಸಂಘರ್ಷದ ಸಂಘ; ಸಂಘರ್ಷದ ಹಿಂದಿನ ಕನಸು, ಕನಸುಗಳ ಹಿಂದಿನ ಸಂಘರ್ಷ ಇವೆಲ್ಲವುಗಳನ್ನು ಮೆಲುಕು ಹಾಕುತ್ತಿದ್ದೆ. ಕಳೆದ ಸುಮಾರು 47 ವರ್ಷಗಳಲ್ಲಿ ನಾನು ನಡೆದ, ದುಡಿದ ಆ ದಿನಗಳಲ್ಲಿ ಆಗಿನ್ನೂ ಸಂಘದ ಬಗ್ಗೆ ಆಸಕ್ತಿ ಇರಲಿಲ್ಲ. ಹಾಂ, ಕನ್ನಡ ಫಿಲಂ ಸೊಸೈಟಿಯ ಸದಸ್ಯತ್ವಕ್ಕಾಗಿ ಬಹಳ ಒದ್ದಾಡಿದ್ದುಂಟು. ಹಣ ಕೊಟ್ಟರೂ ಸೀಟು ಸಿಗದ ಝುಂಡೇವಾಲಾದ ಮಾವಲಂಕಾರ್ ಸಭಾಂಗಣದ ಮೆಟ್ಟಲುಗಳೂ ಪ್ರಿಯವಾಗಿದ್ದ ಕಾಲವದು. ವರ್ಷಕ್ಕೆ 8 ಸಿನಿಮಾಗಳನ್ನು ನೋಡಲು ವರ್ಷಮೊದಲೇ ಹಣ ಕೊಟ್ಟರೂ ವೈಟಿಂಗ್ ಲಿಸ್ಟ್‌ನಲ್ಲಿ ಕಾದೂ ಕಾದು ಒಂದು ಕಾರ್ಡ್ ಸಿಕ್ಕಿದರೆ ಇಬ್ಬರಿಗೆ ಖುಶಿಯೋ ಖುಶಿ. ಪ್ರತಿಯೊಂದು ಸಿನಿಮಾದಲ್ಲೂ ಕಿಕ್ಕಿರಿದ ಕನ್ನಡಿಗರು. ಕೊನೆಗೆ ವೀಡಿಯೋ ಕ್ಯಾಸೆಟ್‌ಗಳ ಕಾಲ ಬಂದಾಗ ಫಿಲಂ ಸೊಸೈಟಿಯೂ ಕ್ಷೀಣವಾಗಿತ್ತು.

ಕನ್ನಡಿಗರಿಗೆ ಅಗತ್ಯವಾಗಿದ್ದ ಶಾಲೆ, ಅಗತ್ಯದ ಕನ್ನಡಿಗರಿಗಿದ್ದ ಸಂಘ, ನಾಟಕ–ಕಲಾಸಕ್ತರ ಕನ್ನಡ ಭಾರತಿ ಹೀಗೆ ಸಂಘ ಸಂಸ್ಥೆಗಳಿದ್ದರೂ, ಬದುಕು ಕಟ್ಟಿಕೊಳ್ಳುವ ಬವಣೆಯಲ್ಲಿದ್ದವರೇ ನಾವೆಲ್ಲ. ಪ್ರೇಕ್ಷಕ ವರ್ಗದ ಹಿಂದಿನ ಸಾಲಿನವರು. ಈಗಿನಂತೆ ದೆಹಲಿ ಆಗ ಬೆಳೆದಿರಲಿಲ್ಲವಾದರೂ ದಕ್ಷಿಣ ದೆಹಲಿಯ ಆಯಕಟ್ಟಿನಲ್ಲಿದ್ದ ಸಂಘದ ನಿವೇಶನ; ಅಲ್ಲೊಂದು ಐ ಆಕಾರದ ಕಟ್ಟಡ; ಎರಡನೆಯ ಮಹಡಿಯಲ್ಲಿ 3 ಬೆಡ್‌ನ 3 ಕೊಠಡಿಗಳು, 2 ಬೆಡ್‌ನ ಒಂದು ಕೊಠಡಿ, 8 ಬೆಡ್‌ಗಳ ಒಂದು ಡಾರ್ಮೆಟರಿ ಮತ್ತು ಒಂದು ಆಫೀಸ್ ಕೊಠಡಿ, ವರಾಂಡ ಮತ್ತು ಬೇಸ್‌ಮೆಂಟಿನ ಒಂದು ಬದಿ ಮಾತ್ರ ಸಂಘದ ಸ್ವಾಧೀನದಲ್ಲಿತ್ತು. ಬೇಸ್‌ಮೆಂಟಿನಲ್ಲಿ ಒಂದಷ್ಟು ಹಳೆಯ ಪುಸ್ತಕಗಳು, ಹಳೆಯ ಸಾಮಾನುಗಳೇ ಸಂಘದ ಆಸ್ತಿ. ಕಟ್ಟಡದ ಗ್ರೌಂಡ್ ಫ್ಲೋರ್, ಫಸ್ಟ್ ಫ್ಲೋರ್ ಮತ್ತು ಒಂದು ಬದಿಯ ನೆಲಮಾಳಿಗೆ ಹೀಗೆ 6000ಕ್ಕೂ ಹೆಚ್ಚು ಚದರ ಅಡಿಗಳನ್ನು ಕೆನರಾ ಬ್ಯಾಂಕಿಗೆ ಬಾಡಿಗೆಗೆ ಕೊಡಲಾಗಿತ್ತು. ಆ ಕಟ್ಟಡವನ್ನು ಕಟ್ಟಲು ಆಗಿನ ಕಾಲದಲ್ಲಿ ಕೆನರಾ ಬ್ಯಾಂಕಿನ ಸಾಲ ಪಡೆಯಲಾಗಿತ್ತು. ಸಂಘದ ಓಪನ್ ಗ್ರೌಂಡ್‌ನಲ್ಲಿ ತಾತ್ಕಾಲಿಕ ನಿರ್ಮಾಣದ ಕ್ಯಾಂಟೀನ್ (ಈಗಿನ ಕರ್ನಾಟಕ ಫುಡ್ ಸೆಂಟರ್), ಅದರ ಬದಿಯಲ್ಲಿ ಒಂದು ಸ್ಟೇಜ್, ಸ್ಟೇಜ್‌ನ ಹಿಂದೆ ನಾಲ್ಕಾರು ಶೌಚಾಲಯಗಳು, ಕ್ಯಾಂಟೀನ್ ಪ್ರವೇಶ ದ್ವಾರದ ಎದುರು ದೆಹಲಿಯ ಏಕೈಕ ತೆಂಗಿನ ಮರ ಆಳೆತ್ತರಕ್ಕೆ ಬೆಳೆದು ನಿಂತಿತ್ತು.

ಮೊಬೈಲ್ ಬಿಡಿ, ಕೆಲವೇ ಶ್ರೀಮಂತರ ಮನೆಗಳಲ್ಲಿ ಮತ್ತು ಕಾರ್ಯಾಲಯಗಳಲ್ಲಿ ದೂರವಾಣಿ ಇದ್ದ ಕಾಲವದು. ಬರಹ ಮೂಲಕವೇ ಹೆಚ್ಚಿನ ಸಂಪರ್ಕ. ಹಾಗಾಗಿಯೇ ಆ ದಿನಗಳಲ್ಲಿ ಹುಟ್ಟಿಕೊಂಡ ಶ್ರೀ ಬಾ. ಸಾಮಗರ 'ದೆಹಲಿ ಕನ್ನಡಿಗ' ಪತ್ರಿಕೆಗೆ ಮಹತ್ವ ಬಂದಿತ್ತು.

ತುರ್ತು ಪರಿಸ್ಥಿತಿಯ ನಂತರ, ಸಂಘ ಸಂಸ್ಥೆಗಳಲ್ಲೂ ನಿಧಾನವಾಗಿ ಪ್ರಜಾಪ್ರಭುತ್ವ ಮತ್ತೆ ಬಲವಾಗುತ್ತಾ ಬಂದಿರಬೇಕು. ಕೇಂದ್ರ ಸಚಿವೆ ಆಗಿದ್ದ, ಡಾ. ಸರೋಜಿನಿ ಮಹಿಷಿಯವರ ಅಧ್ಯಕ್ಷತೆಯಲ್ಲಿ ಸಂಘದ ಕಾರ್ಯಕ್ರಮಗಳೇನೂ ಈಗಿನಂತೆ ಇರಲಿಲ್ಲ ನಿಜ. ಆದರೆ ರಾಜ್ಯೋತ್ಸವದ ಕಾರ್ಯಕ್ರಮಗಳು ಮಂಡಿ ಹೌಸ್‌ನ ಸಭಾಂಗಣಗಳಲ್ಲಿ ನಡೆಯುತ್ತಿದ್ದವು. ಬದುಕು, ಸಾಹಿತ್ಯ, ಆಡಳಿತ, ಮುಂತಾದ ವಿಷಯಗಳಲ್ಲಿ



'ABHIMATA'/Kannada monthly, March 1994

RNI Regn No. 53405/91
Regn No. DL - 14040/92

ನಾಟಕೋತ್ಸವ

- ಎಸ್. ಕೃಷ್ಣ ಭಟ್ಟ
ಗೌರವ ಕಾರ್ಯದರ್ಶಿ

ಗಣೇಶನ ಮದುವೆ

ವರದಿ - ಶಂಕರ

ಸಂಘ ಮೊಕದ್ದಮೆಯಿಂದ ಮುಕ್ತ

ವರದಿ - ಅಭಿಮತ ಬಳಗ

ಪಂಡಿತರ ತಲೆದೂಗಿಸಬಲ್ಲ, ವಿದ್ವತ್‌ಪೂರಿತವಾದ ಮಹಿಷಿಯವರ ಭಾಷಣ ಕೇಳುವುದೇ ಹಬ್ಬ, ಸಂಘದ ನಿವೇಶನ, ಪ್ರಾರಂಭದ ಕಟ್ಟಡ ಅವರ ಕೊಡುಗೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ದೆಹಲಿ ಕರ್ನಾಟಕ ಸಂಘ ಎರಡರಲ್ಲೂ ಅಧ್ಯಕ್ಷರಾಗಿದ್ದ ಡಾ. ಮಹಿಷಿಯವರಿಗೆ ದೆಹಲಿ ಕನ್ನಡಿಗರಲ್ಲಿ ತಮ್ಮ ಪ್ರಭಾವಲಯವನ್ನು ಹೆಚ್ಚು ದಿನ ಉಳಿಸಿಕೊಳ್ಳಲು ಆಗಲೇ ಇಲ್ಲ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಅವರು ಅಧ್ಯಕ್ಷರಾಗಿದ್ದಾಗ ನಡೆದ ಸಂಘರ್ಷಗಳು, ಹೋರಾಟಗಳು ಶಾಲೆಯ ಹಳೆಯ ಕಡತಗಳಲ್ಲಿ ಉಲ್ಲೇಖಿತವಾಗಿವೆ. ಅದೇ ರೀತಿ ದೆಹಲಿ ಕರ್ನಾಟಕ ಸಂಘದಲ್ಲಿ, ಅವರು ಅಧ್ಯಕ್ಷರಾಗಿದ್ದಾಗ ನಡೆದ ಹೋರಾಟಗಳ ಫಲಶ್ರುತಿಯಾಗಿ ಕರ್ನಾಟಕ ಸಂಘ ಮೊದಲ ಬಾರಿಗೆ ಕೋರ್ಟ್ ಮೆಟ್ಟಲೇರಿತ್ತು. ಸಂಘವನ್ನು ಒಂದು ಖಾಸಗಿ ಟ್ರಸ್ಟ್ ಮಾಡಬೇಕು ಮತ್ತು ತಾವು ಶಾಶ್ವತ ಟ್ರಸ್ಟಿ ಆಗಿರಬೇಕು ಎಂಬುದು ಡಾ.ಮಹಿಷಿಯವರ ಇಚ್ಛೆ. ಆದರೆ, ಅದು ಸಾರ್ವಜನಿಕರ ಸಂಘವಾಗಬೇಕು ಎಂಬುದು ಸುಪ್ರೀಂಕೋರ್ಟಿನ ನ್ಯಾಯವಾದಿಗಳಾಗಿದ್ದ ಶ್ರೀ ಕೆ.ಆರ್. ನಾಗರಾಜ್ ಅವರ ಹೋರಾಟವಾಗಿತ್ತು. ಮನೆ ಮನೆಗೆ ಭೇಟಿ ನೀಡಿ, ಸದಸ್ಯತ್ವ ಸ್ವೀಕರಿಸುವಂತೆ ಒತ್ತಾಯಿಸುತ್ತ, ಸಂಘ ಸಾರ್ವಜನಿಕರಿಗಾಗಿ ಉಳಿಯಬೇಕೆಂದು ಸಂಘರ್ಷ ಮಾಡಿದ್ದರು ಶ್ರೀ ಕೆ.ಆರ್. ನಾಗರಾಜರು. ಅವರೊಡನಿದ್ದ ಹಿರಿಯರನೇಕರು, ತಮ್ಮ ಹೋರಾಟದ ಕುರುಹುಗಳನ್ನು ಆಗಿನ್ನೂ ಯುವಕರಾಗಿದ್ದ ನಮಗೆ ತೋರಿಸುತ್ತಿದ್ದರು.

ಇಂದಿನ ಕಾರ್ಪೋರೇಟ್ ಜಗತ್ತಿನಲ್ಲಿ 'ಸೆನ್ಸ್ ಆಫ್ ಬಿಲಾಂಗಿಂಗ್‌ನೆಸ್' ಬಗ್ಗೆ ಬಹಳಷ್ಟು ಕಲಿಸಲಾಗುತ್ತದೆ. ಆದರೆ ಸಾಮಾಜಿಕ ಸಂಸ್ಥೆಗಳಲ್ಲಿ ಅದೇ ಭಾವದಲ್ಲಿ ತುಂಬಾ ತೊಡಗಿಸಿಕೊಂಡಾಗ, ಸಂಸ್ಥೆಯ ಮೇಲಿರುವ ಪ್ರೀತಿ, ಕಾಳಜಿ, ಜವಾಬ್ದಾರಿ, ಕನಸುಗಳೆಲ್ಲ ಇತರರಿಗೆ 'ಏಕಸ್ವಾಮ್ಯ' (ಮನೋಪಲಿ) ದಂತೆ ಅನಿಸುವುದು ಸಹಜ. ಪಿಸು ಮಾತುಗಳಿಗೆ ಧ್ವನಿಸೇರಿ, ಸವಾಲುಗಳಾಗಿ, ಗುಂಪುಗಳಾಗಿ, ಸಂಘರ್ಷಗಳಾಗಿ, ಸಂಸ್ಥೆಯ ಏಳಿಗೆಯ ಹೆಸರಲ್ಲಿ ಪ್ರಜಾಪ್ರಭುತ್ವದ ಲೇಪನವಾಗುವುದೂ ಇಲ್ಲದಿಲ್ಲ. ವಿಚಾರಧಾರೆಗಳ ಭಿನ್ನತೆ, ಭಿನ್ನತೆಯ ವಿಚಾರಧಾರೆಗಳಾಗಿ ಸಂಸ್ಥೆಗಳು ಸೊರಗಬಾರದು. 80ರ ದಶಕದಲ್ಲಿ ಸಂಘದ ಸಂಘರ್ಷ ವಿಚಾರ ಧಾರೆಯ ಭಿನ್ನತೆ ಎಂದು ಹೇಳಿದರೂ ತಪ್ಪಲ್ಲ. ಆದರೆ ಈ ಭಿನ್ನ ವಿಚಾರಗಳಲ್ಲಿ ಸಾರ್ವಜನಿಕ ಗ್ರಹಿಕೆಗಳು (Perception) ಚುನಾವಣಾ ದೃಷ್ಟಿಯಿಂದ ಹೊರತಾಗಿದ್ದರೆ, ಸಂಸ್ಥೆಯ ಜೊತೆಗೆ ಕನ್ನಡದ ಮನಸುಗಳಿಗೂ ಹಿತ. ಸಂಘದ ನಡೆದುಬಂದ ದಾರಿಯ ಅವಲೋಕನದಿಂದ ನಾವೆತ್ತಸಾಗಬೇಕು ಅನ್ನುವುದನ್ನು ನಿರ್ಧರಿಸಲು ಸುಲಭವಾಗಬಹುದು. ಸಂಘ ಸಂಘರ್ಷದ ಮೊದಲ ಹಂತದ ಮುಕ್ತಾಯದ ಕುರುಹಾಗಿ ಅಭಿಮತದ 1994ರ ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾದ ಅಧಿಕೃತ ಸುದ್ದಿಯ ತುಣುಕು ಇಲ್ಲಿದೆ.

**ಬರಹ: ಸರವು ಕೃಷ್ಣ ಭಟ್**

# ದೆಹಲಿ ಕರ್ನಾಟಕ ಸಂಘದಲ್ಲಿ ಭಕ್ತಿ ಶ್ರದ್ಧೆಗಳಿಂದ ಗಣೇಶೋತ್ಸವ ಆಚರಣೆ



ಭಾರತದಾದ್ಯಂತ ಪ್ರತಿ ವರ್ಷದ ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿಯು (ಚತುರ್ಥಿಯ) ದಿನದಂದು ಅತ್ಯಂತ ಶ್ರದ್ಧೆ, ಭಕ್ತಿಗಳ ಜೊತೆಗೆ ಸಂಭ್ರಮ ಸಡಗರದಿಂದ ಆಚರಿಸಲ್ಪಡುವ ಹಬ್ಬ ಗಣೇಶ ಚತುರ್ಥಿ. ಅಗ್ರ ಪೂಜಾರ್ಹ, ಮೂಷಿಕ ವಾಹನನಾದ ಗಣಪನನ್ನು ಪ್ರತಿಯೊಂದು ಶುಭ ಕಾರ್ಯದ ಮೊದಲು ಪ್ರಾರ್ಥನೆ ಮಾಡಿ, ನಡೆಯುವ ಎಲ್ಲಾ ಕಾರ್ಯಗಳು ಯಾವುದೇ ಅಡ್ಡಿ ಆತಂಕಗಳಿಲ್ಲದೇ ಸಾಂಗವಾಗಿ ನೆರವೇರಲಿ ಎಂದು ವಿಘ್ನ ವಿನಾಯಕನ ಪೂಜೆಯನ್ನು ಆರಂಭದಲ್ಲಿಯೇ ಮಾಡಲಾಗುತ್ತದೆ. ಇನ್ನು ಗಣೇಶನ ಹಬ್ಬದಲ್ಲಂತೂ ಎಲ್ಲೆಲ್ಲೂ ಏಕದಂತ ಗಜವದನನ ಸುಂದರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆಗೈದು ಸಂಭ್ರಮಿಸುವುದನ್ನು ನೋಡಿ ಕಣ್ತುಂಬಿ ಕೊಳ್ಳುವುದೇ ಒಂದು ಅವರ್ಣನೀಯ ಆನಂದ.

ಪ್ರತಿವರ್ಷವೂ ಅನುಸರಿಸಿಕೊಂಡು ಬರುತ್ತಿರುವ ರೂಢಿಯಂತೆ ದೆಹಲಿ ಕನ್ನಡಿಗರ ಭಾವ ಶ್ರದ್ಧೆಗಳ ಕೇಂದ್ರವಾಗಿರುವ ದೆಹಲಿ ಕರ್ನಾಟಕ ಸಂಘದಲ್ಲಿ ಈ ವರ್ಷ ದಿನಾಂಕ 31.08.2022 ರಂದು ಬೆಳಿಗ್ಗೆ ಶುಭ ಮಹೂರ್ತದಲ್ಲಿ ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು  ಹಾಗೂ ಆಜೀವ ಸದಸ್ಯರುಗಳೂ ಸೇರಿದಂತೆ ನೆರೆದಿದ್ದ ಭಕ್ತ ವೃಂದದ ಸಮ್ಮುಖದಲ್ಲಿ ವಿಘ್ನ ವಿನಾಯಕನಾದ ಮಹಾ ಗಣಪತಿಯ ಮೂರ್ತಿಯನ್ನು ಅಲಂಕಾರಭರಿತ ಮಂಟಪದಲ್ಲಿ ಪ್ರತಿಷ್ಠಾಪನೆ ಮಾಡಿ ಐದು ದಿನಗಳವರೆಗೆ ಬೆಳಿಗ್ಗೆ ಮತ್ತು ಸಂಜೆ ಎರಡೂ ಹೊತ್ತಿನಲ್ಲೂ ಮಹಾಗಣಪತಿಗೆ ಮಹಾ ಮಂಗಳಾರತಿ ಮಾಡಿ ನೆರೆದ ಭಕ್ತ ವೃಂದಕ್ಕೆ ಪ್ರಸಾದ ವಿನಿಯೋಗಿಸುವ ಕೈಂಕರ್ಯದಲ್ಲಿ ಸಂಘದ ಪದಾಧಿಕಾರಿಗಳ ಕುಟುಂಬದವರೂ ಮುಖ್ಯವಾಗಿ ಅಧ್ಯಕ್ಷರಾದ ಸಿ.ಎಂ. ನಾಗರಾಜ, ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್, ಖಜಾಂಚಿ ಶ್ರೀ ರಾಧಾಕೃಷ್ಣ, ಜಂಟಿ ಕಾರ್ಯದರ್ಶಿಗಳಾದ ಶ್ರೀ ಬಿ. ನಾರಾಯಣ ಮತ್ತು ಶ್ರೀಮತಿ ಸುಮಿತಾ ಮುರಗೋಡ, ಅಭಿಮತ ಪ್ರಧಾನ ಸಂಪಾದಕರಾದ ಶ್ರೀ ಎನ್.ಪಿ. ಚಂದ್ರಶೇಖರ್, ಸದಸ್ಯರುಗಳಾದ ಶ್ರೀ ಶಿವಪ್ಪ, ಶ್ರೀ ಪ್ರಭಾಕರ ಮಡ್ಡಿತೋಟ, ಎ.ಟಿ. ಶ್ರೀನಿವಾಸ್, ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಸವಿತಾ ನೆಲ್ಲಿ, , ಶ್ರೀ ನವೀನ್ ಕುಮಾರ್, ಶ್ರೀಮತಿ ಅಶ್ವಿನಿ ಬಿ.ಎಸ್. ಶ್ರೀ ಸಂತೋಷ್ ಜೆ ಮತ್ತು ಶ್ರೀ ಕೆ.ಎಸ್. ಮೂರ್ತಿ ಅವರ ಕುಟುಂಬಗಳೂ ಸೇರಿದಂತೆ ವಿವಿಧ ಕನ್ನಡಿಗರ ಕುಟುಂಬಗಳು ಸ್ವ-ಇಚ್ಛೆಯಿಂದ ಬಂದು ಪಾಲ್ಗೊಂಡು ವಿಘ್ನ ವಿನಾಯಕನ ಕೃಪೆಗೆ ಪಾತ್ರರಾದರು. ಐದನೇ ದಿನ 04.09.2022 ರಂದು ಗಣಪತಿಯನ್ನು ಪೂಜಾ ವಿಧಾನಗಳೊಂದಿಗೆ ನೆರೆದಿದ್ದ ಭಕ್ತ ಸಮೂಹದ ಜಯಘೋಷದೊಂದಿಗೆ ವಿಸರ್ಜನೆ ಮಾಡಲಾಯಿತು.

ಅದೇ ರೀತಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಗಳಾದ ಜನಕಪುರಿ ಕನ್ನಡ ಕೂಟ, ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್, ಕರ್ನಾಟಕ ಭವನ ವಸತಿ ಸಮುಚ್ಚಯಗಳು, ಶ್ರೀ ಗಣೇಶ ಮಿತ್ರ ಮಂಡಳಿ, ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ, ಎನ್‌ಸಿಆರ್ ನಲ್ಲಿರುವ ಗುರುಗಾಂವ್ ಕನ್ನಡ ಸಂಘ ಇತ್ಯಾದಿ ಕನ್ನಡ ಸಂಘಟನೆಗಳು ಕೂಡ ಗಣೇಶೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡು ಬರುತ್ತಿವೆ. ಈ ಎಲ್ಲ ಸಂಘಟನೆಗಳ ಗಣೇಶೋತ್ಸವ ಆಚರಣೆಯ ಸಂಕ್ಷಿಪ್ತ ಮಾಹಿತಿ ಇಂತಿದೆ.

**ಅಭಿಮತ ವರದಿ**



## ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯಿಂದ ಗಣೇಶೋತ್ಸವ



ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷದ ಗಣೇಶೋತ್ಸವ ಆಚರಣೆ ಸೆಪ್ಟೆಂಬರ್ 4, 2022ರಂದು ಪೋಲಿಸ್ ಕಾಲೋನಿ ಅಶೋಕ್ ವಿಹಾರದಲ್ಲಿ ಅದ್ದೂರಿಯಿಂದ ನೆರವೇರಿತು. ಕಲ್ಯಾಣ ಸಮಿತಿಯ ಅಧ್ಯಕ್ಷರಾದ ಶ್ರೀ ದೇವೇಂದ್ರಪ್ಪ, ಕಾರ್ಯದರ್ಶಿ ಶ್ರೀ ಬಸವರಾಜು ಅವರ ನೇತೃತ್ವದ ಕಾರ್ಯಕಾರಿ ಸಮಿತಿಯು ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಸುಮಾರು 150 ಕ್ಕೂ ಹೆಚ್ಚು ಸದಸ್ಯರು ಸೇರಿ ಶ್ರೀ ಗಣೇಶನ ಕೃಪೆಗೆ ಪಾತ್ರರಾದರು

# ಅದ್ದೂರಿಯಾಗಿ ಗಣೇಶೋತ್ಸವ ಆಚರಿಸಿದ ಗುರುಗಾಂವ್ ಕನ್ನಡ ಸಂಘ



ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಗುರುಗಾಂವ್ ಕನ್ನಡ ಸಂಘವು ಅತಿ ವಿಜೃಂಭಣೆಯಿಂದ ಗಣೇಶೋತ್ಸವವನ್ನು ಆಚರಿಸಿತು. ಆಗಸ್ಟ್ 31 ರಂದು ಬೆಳಿಗ್ಗೆ 10 ಗಂಟೆಗೆ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಲಾಯಿತು. ಸಾಯಂಕಾಲ ಆರ್.ಕೆ. ಕ್ಯಾಂಟರ್ ಅವರಿಂದ ಮಹಾಪ್ರಸಾದ ವಿತರಿಸಲಾಯಿತು. ಐದು ದಿನಗಳ ಕಾಲ ನಡೆದ ಪೂಜಾ ಕಾರ್ಯಕ್ರಮದಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ ಮಹಾಮಂಗಳಾರತಿ ಮಾಡಿ ಜೊತೆಗೆ ಮಹಾ ಪ್ರಸಾದ ವಿತರಿಸಲಾಯಿತು. ಪ್ರತಿ ದಿನ ಸಂಜೆ ಪೂಜೆಗೆ ಬರುತಿದ್ದ ಕನ್ನಡ ಭಕ್ತಾಧಿಗಳು ಭಕ್ತಿಯಿಂದ ಭಕ್ತಿಗೀತೆಗಳನ್ನು ಹಾಡಿದರು. ಗುರುಗಾಂವ್ ಕನ್ನಡ ಸಂಘದ ಸದಸ್ಯರಾದ ಗೋಪಾಲ್ ತಳವಾರ ಮತ್ತು ರಮೇಶ್ ಕೆ.ಎಸ್. ಹಾಗೂ ತಂಡದವರು ಮಹಾಪ್ರಸಾದ ತಯಾರಿಸಲು ನೆರವಾದರು.

ಸೆಪ್ಟೆಂಬರ್ 2ರ ಶುಕ್ರವಾರ ಸಂಜೆಯ ಪೂಜೆಯಲ್ಲಿ ಗುರುಗ್ರಾಮದ ಸೆಕ್ಟರ್–39 ರ ಹವ್ಯಾಸಿ ಕಲಾವಿದರು ಗಣೇಶನ ಭಜನೆ ಪದಗಳನ್ನು ಹಾಡುವ ಮೂಲಕ ಪೂಜೆಗೆ ಬಂದಿದ್ದ ಭಕ್ತರನ್ನು ಗಣೇಶನ ಭಕ್ತಿಯಲ್ಲಿ ಮಗ್ನರಾಗುವಂತೆ ಮಾಡಿದರು. ಸೆಪ್ಟೆಂಬರ್ 3, ಶನಿವಾರದಂದು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗುರುಗಾಂವ್ ಕನ್ನಡ ಮಕ್ಕಳಿಂದ ಹಾಡು, ನೃತ್ಯ ಮಾಡುವ ಮೂಲಕ ಕಾರ್ಯಕ್ರಮ ಭರ್ಜರಿಯಾಗಿ ನಡೆಯಿತು. ಗುರುಗಾಂವ್ ಕನ್ನಡಿಗರ ಜೊತೆಗೆ ದೆಹಲಿ ಕನ್ನಡಿಗರು ಕೂಡ ಬಂದು ಕಾರ್ಯಕ್ರಮ ನೋಡಿ ಆನಂದ ಪಟ್ಟರು.

ಇದೇ ಸಂದರ್ಭದಲ್ಲಿ ಗುರುಗಾಂವ್ ಕನ್ನಡ ಸಂಘವು ಗುರುಗ್ರಾಮದ ಯುವ ಜನತೆಯ ಮಾರ್ಗದರ್ಶಿಗಳು ಹಾಗು ಹಿರಿಯ ಕನ್ನಡಿಗರಾದ ಶ್ರೀ ಯು.ಎ. ವಸಂತ ರಾವ್ ಅವರಿಗೆ 'ಗುರುಗಾಂವ್ ಕನ್ನಡ ಸೇವಾ' ಪ್ರಶಸ್ತಿ ನೀಡಿ ಗೌರವಿಸಲಾಯಿತು.





ಸೆಪ್ಟೆಂಬರ್ 4, ಭಾನುವಾರ ಬೆಳಿಗ್ಗೆ ನಡೆದ ವಿಸರ್ಜನೆ ಪೂಜೆಯಲ್ಲಿ ಅತೀ ಹೆಚ್ಚು ಕನ್ನಡಿಗರು ಸೇರಿದ್ದರು. ಮಕ್ಕಳು ಮಹಿಳೆಯರು ಹಿರಿಯರು ಎಲ್ಲರೂ ಕನ್ನಡ ಗೀತೆಗಳ ಡಿ.ಜೆ. ಶಬ್ದಕ್ಕೆ ಹಾಗು ಡೋಲ್ ಬಡಿತಕ್ಕೆ ಕುಣಿದು ಕುಪ್ಪಳಿಸಿ ಮೆರವಣಿಗೆ ಮೂಲಕ ಗುರುಗ್ರಾಮದ ಸೆಕ್ಟರ್ 9 ಸಮೀಪವಿರುವ ಬಸಾಯೀ ಪೊಂಟ್‌ನಲ್ಲಿ ಅಂತಿಮ ಪೂಜೆಯೊಂದಿಗೆ ಗಣೇಶನನ್ನು ವಿಸರ್ಜನೆ ಮಾಡಲಾಯಿತು.

ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು, ಎಲ್ಲ ಪದಾಧಿಕಾರಿಗಳು, ಸದಸ್ಯರು ಹಾಗೂ ಎಲೆಮರೆ ಕಾಯಿಯಂತೆ ಶ್ರೀ ಗಣೇಶೋತ್ಸವದ ಯಶಸ್ವಿಗೆ ಕೈ ಜೋಡಿಸಿದ ದಾನಿಗಳು ಮತ್ತು ಭಕ್ತಾದಿಗಳ ಸಹಾಯ ಸಹಕಾರದಿಂದ 2022ರ ಸಾಮೂಹಿಕ ಶ್ರೀ ಗಣೇಶೋತ್ಸವು ಯಶಸ್ವಿಗೊಂಡಿತು.

**ಪ್ರಭಾಕರ್ ಮಡ್ಡಿತೋಟ**
ಗುರುಗ್ರಾಮ ಕನ್ನಡಿಗ

## ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ನಿನ ವತಿಯಿಂದ ಗಣೇಶ ಚತುರ್ಥಿ ಆಚರಣೆ

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ನಿನ ಮಹಿಳೆಯರು ಸೆಪ್ಟೆಂಬರ್ 2 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಭಜನೆ, ಸಂಗೀತ ಭಕ್ತಿಗೀತೆಗಳನ್ನಾಡಿ ಗಣೇಶ ಹಬ್ಬವನ್ನು ಆಚರಿಸಿದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಅಶ್ವಿನಿ ಬಿ.ಎಸ್ ಅವರು ಎಲ್ಲರಿಗೂ ಭೋಜನ ವ್ಯವಸ್ಥೆ ಮಾಡಿಸಿದ್ದರು.

**ದೀನಾ ಜಾಯ್ಸ್**



# ಜನಕಪುರಿ ಕನ್ನಡ ಕೂಟದಿಂದ ಗಣೇಶೋತ್ಸವ





ಪ್ರಥಮ ಪೂಜಿಪ ಗಣೇಶನ ಉತ್ಸವಾಚರಣೆಯಲ್ಲಿ ಜನಕಪುರಿ ಕನ್ನಡ ಕೂಟದ ಸದಸ್ಯರೆಲ್ಲರೂ ಅತ್ಯುತ್ಸಾಹದಿಂದ ಪೂಜೆಯಲ್ಲಿ ಪಾಲ್ಗೊಂಡು ಭಕ್ತಿ ಭಾವ ಮೆರೆದರು. ಜನಕಪುರಿ ಕನ್ನಡ ಕೂಟದ ಅವಿಭಾಜ್ಯ ಅಂಗವೇ ಆಗಿರುವ ಜನಕಪುರಿ ಮಹಿಳಾ ಮಂಡಳಿಯ ಸಹಯೋಗವೂ ಇತ್ತು. ಪೂಜೆಯಲ್ಲಿ ದೆಹಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅಲ್ಲಿ ಪೂಜೆಯ ಸಂಭ್ರಮ ಮನೆ ಮಾಡಿತ್ತು. ಶಾಸ್ತ್ರೋಕ್ತವಾಗಿ ಗಣೇಶ ಪೂಜೆ ನೆರವೇರಿತು. ಜನಕಪುರಿ ಮಹಿಳಾ ಮಂಡಳಿಯ ಸದಸ್ಯರು ಹಾಗೂ ಅವರ ಕುಟುಂಬದವರು ಈ ಸಂದರ್ಭ 'ಭಕ್ತಿ ಗೀತೆ' ಪ್ರಸ್ತುತಪಡಿಸುವ ಮೂಲಕ ಕಾರ್ಯಕ್ರಮಕ್ಕೆ ಮೆರುಗು ತಂದರು. ದೆಹಲಿಯ ಹಾಗೂ ಗುರುಗಾಂವ್ ಕನ್ನಡಿಗರು ರಾಷ್ಟ್ರದ ರಾಜಧಾನಿ ಹಾಗೂ ರಾಷ್ಟ್ರೀಯ ರಾಜಧಾನಿ ಕ್ಷೇತ್ರದ ಕನ್ನಡಿಗ ನಿವಾಸಿಗಳು ಕುಟುಂಬ ಸಮೇತರಾಗಿ ಆಗಮಿಸಿ, ಗಣೇಶ ಪೂಜೆಯಲ್ಲಿ ಭಾಗವಹಿಸಿ, ಗಣೇಶನ ಕೃಪೆಗೆ ಪಾತ್ರರಾದರು. ಜನಕಪುರಿ ಕನ್ನಡ ಕೂಟವು ತನ್ನ ಆದಾಯದ ಪರಿಮಿತಿ ಇದ್ದ ಹಿನ್ನೆಲೆಯಲ್ಲಿ ಸಹ ಸದಸ್ಯರು ಭಕ್ತಿ ಭಾವದಿಂದ ಗಣೇಶೋತ್ಸವ ಕಾರ್ಯಕ್ರಮಕ್ಕೆ ಸಹಾಯ ಹಸ್ತ ಚಾಚಿದರು. ಇವರ ಸಹಕಾರದಿಂದ ಕಾರ್ಯಕ್ರಮ ಅತ್ಯಂತ ಯಶಸ್ಸುಗೊಳ್ಳಲು ಕಾರಣವಾಯಿತು. ಇನ್ನು ಕೆಲ ಭಕ್ತರು ಭೋಜನ ವ್ಯವಸ್ಥೆ ಮಾಡಿಸಿ ತಮ್ಮ ಭಕ್ತಿ ಪರಾಕಾಷ್ಠೆ ಮೆರೆದರು. ಹಲವರು ಪೂಜಾ ವ್ಯವಸ್ಥೆ ಮಾಡಿ ಕಾರ್ಯಕ್ರಮ ಸಾಂಗವಾಗಿ ನಡೆಯಲು ಪ್ರೇರಣೆಯಾದರು.

ಇಷ್ಟು ಉತ್ತಮವಾಗಿ ಕಾರ್ಯಕ್ರಮ ಮೂಡಿ ಬರಲು ಶ್ರಮಿಸಿದ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಶ್ರೀನಾಥ್, ಉಪಾಧ್ಯಕ್ಷರಾದ ಡಾ. ಅಶೋಕ್ ಎಂ. ಈಟಿ, ಕಾರ್ಯದರ್ಶಿಗಳ ಗೈರು ಹಾಜರಿಯಲ್ಲಿ ಶ್ರಮಿಸಿದ ಜಂಟಿ ಕಾರ್ಯದರ್ಶಿ ಶ್ರೀ ಕೃಷ್ಣ ರಾಜ್, ಖಜಾಂಚಿ ಶ್ರೀ. ಎಂ. ವಿ. ವೆಂಕಟೇಶ್, ಮಹಿಳಾ ಮಂಡಳಿಯ ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ನಯನ ಮಾಣಕಪುರೆ, ಶ್ರೀಮತಿ ಲಾವಣ್ಯ ಬಸವರಾಜು, ಶ್ರೀಮತಿ ಪ್ರೇರಣಾ ವೆಂಕಟೇಶ್ ಹಾಗೂ ಕೂಟದ ಎಲ್ಲಾ ಸದಸ್ಯರಿಗು ಅನಂತಾನಂತ ಧನ್ಯವಾದಗಳು.

**ಶ್ರೀನಾಥ್ ಎನ್.ಆರ್.**

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಗಣೇಶ ಚತುರ್ಥಿ ಆಚರಣೆ



ರಾಷ್ಟ್ರದ ರಾಜಧಾನಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಆಗಸ್ಟ್ 31 ರಂದು 'ಗಣೇಶ ಚತುರ್ಥಿ' ಹಬ್ಬವನ್ನು ಭಕ್ತಿ ಪೂರ್ವಕ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.

ಜ್ಞಾನ, ಆಸೆ, ಯಶಸ್ಸುಗಳನ್ನು ನೆರವೇರಿಸುವ ಅಧಿಪತಿಯಾದ ಗಣಪನಿಗೆ ಸಂಸ್ಥೆಯ ಸಂಸ್ಕೃತ ಶಿಕ್ಷಕರು ಹಾಗೂ ಪಂಡಿತ ಗಣೇಶ ಹೆಗಡೆ ಅವರ ಪೌರೋಹಿತ್ಯದಲ್ಲಿ ಸಂಸ್ಥೆಯ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಅವರು ಪೂಜಾ ವಿಧಿ–ವಿಧಾನಗಳನ್ನು ನೆರವೇರಿಸಿದರು.

ಶ್ರದ್ಧಾಭಕ್ತಿಯ ಈ ಆಚರಣೆಯಲ್ಲಿ ಸಂಸ್ಥೆಯ ಉಪಾಧ್ಯಕ್ಷರುಗಳಾದ ಚಂದ್ರಶೇಖರ ಎನ್.ಪಿ., ಟಿ.ಎಂ. ಮೈಲಾರಪ್ಪ, ಗೌರವ ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್, ಸಂಸ್ಥೆಯ ಆಡಳಿತ ಸಮಿತಿ ಸದಸ್ಯರಾದ ತಿಮ್ಮಪ್ಪ ಜಿ.ಆರ್, ಮಾಲಿನಿ ಪ್ರಹ್ಲಾದ್, ಗಿರೀಶ್ ಎಸ್., ದೀನಾ ಜಾಯ್ಸ್, ಸಂತೋಷ್ ಕೆ.ಕೆ., ಶಿಕ್ಷಕ, ಶಿಕ್ಷಕೇತರ ವೃಂದದವರು ಪಾಲ್ಗೊಂಡು ವಿಘ್ನ ವಿನಾಯಕನ ಕೃಪೆಗೆ ಪಾತ್ರರಾದರು. ಬಳಿಕ ಸೂರ್ಯಾಸ್ತದ ಸಮಯದಲ್ಲಿ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿ, ಶಾಲಾ ಆವರಣದಲ್ಲಿಯೇ ಗಣೇಶ ವಿಸರ್ಜನೆ ಮಾಡಲಾಯಿತು.

**ಅರವಿಂದ ಬಿಜ್ಜೈ**

# ಕರ್ನಾಟಕ ಭವನದ ವಸತಿ ಸಮುಚ್ಚಯದಲ್ಲಿ ಸಡಗರ ಸಂಭ್ರಮ ಹಾಗೂ ಭಕ್ತಿ ಭಾವಗಳಿಂದ ಆಚರಿಸಲ್ಪಟ್ಟ ಗಣೇಶೋತ್ಸವ



ನವದೆಹಲಿಯ ಕರ್ನಾಟಕ ಭವನದ ವಸತಿ ಸಮುಚ್ಚಯ ಕಲ್ಯಾಣ ಸಮಿತಿಯು ತನ್ನ 16ನೇ ವರ್ಷದ ಗಣೇಶ ಚತುರ್ಥಿ ಆಚರಣೆಯನ್ನು ಆಗಸ್ಟ್ 30ರಂದು ಆಯೋಜಿಸಿತ್ತು. ದೆಹಲಿಯ ಆರ್.ಕೆ. ಪುರಂ ವಿಧಾನಸಭಾ ಕ್ಷೇತ್ರದ ಶಾಸಕಿ ಶ್ರೀಮತಿ ಪ್ರಮೀಳ ಟೋಕಸ್, ಕಾರ್ಪೊರೇಟರ್ ತುಳಸಿ ಜೋಶಿ ಹಾಗೂ ಮಾಜಿ ಎಂಎಲ್ಎ ಮತ್ತಿತರ ಗಣ್ಯರು ಗಣೇಶ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಆರೋಗ್ಯ, ಶಾಂತಿ ನೆಮ್ಮದಿ ವೃದ್ಧಿಸಲು ಗಣೇಶನ ಕೃಪೆ ಎಲ್ಲರಿಗೂ ದೊರೆಯಲಿ ಎಂದು ಹಿತ ನುಡಿಗಳನ್ನಾಡಿದರು. ಕರ್ನಾಟಕ ಭವನದ ಆರ್.ಕೆ. ಪುರಂನ ಎರಡನೇ ಹಂತದ ಎಲ್ಲಾ ನಿವಾಸಿಗಳು ಒಂದೆಡೆ ಕಲೆತು ಉತ್ಸಾಹದಿಂದ ಒಂದು ಕುಟುಂಬದಂತೆ ಪಾಲ್ಗೊಂಡು ಗಣೇಶನ ಹಬ್ಬ ಆಚರಿಸಿದ್ದು ವಿಶೇಷವಾಗಿತ್ತು. ಬಹಳಷ್ಟು ದೆಹಲಿಯ ಕನ್ನಡಿಗರೆಲ್ಲರೂ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂತಸ ಪಟ್ಟರು. ಎಲ್ಲರೂ ಒಟ್ಟಾಗಿ ಸೇರಿ, ಸಡಗರ ಸಂಭ್ರಮದಿಂದ ಆಚರಿಸಿ ಗಣೇಶನ ಕೃಪೆಗೆ ಪಾತ್ರರಾದರು.

**ಸಾಂಸ್ಕೃತಿಕ ಸಂಜೆ :** ಸ್ಥಳೀಯ ಕಲಾವಿದರಾದ ಎಸ್. ಕುಮಾರ ಹಾಗೂ ಅವರ ಪತ್ನಿ ನೇತ್ರಾವತಿ ಕುಮಾರ್, ಎ.ಟಿ. ಶ್ರೀನಿವಾಸ್, ಗಿರೀಶ್, ಜಯಶ್ರೀ ಬಸವರಾಜ್, ಶುಭಾ ದೇವಿಪ್ರಸಾದ್, ಮಮತಾ ಶಿವರಾಮ್, ಪೂರ್ಣಿಮಾ ಅಡಿಗ,ಸ್ವಾತಿ ತಿವಾರಿ,ದೀಪ, ದಿವ್ಯ ಹಾಗೂ ಕಲಾಸಕ್ತರು ಭಕ್ತಿಗೀತೆ, ಭಾವಗೀತೆ, ಚಲನ ಚಿತ್ರಗೀತೆ ಹಾಗೂ ಜಾನಪದ ಗೀತೆಗಳನ್ನ ಪ್ರಸ್ತುತಪಡಿಸಿ, ಜನಮನ್ನಣೆ ಗಳಿಸಿದರು.

ಯಾವುದೇ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಗೊಳ್ಳಲು ಅದರ ಹಿಂದಿರುವ ಪರಿಶ್ರಮದ ಜೊತೆಗೆ ಸಂವಹನವೂ ಬಹು ಮುಖ್ಯವಾಗಿರುತ್ತದೆ. ಈ ಸಂಗೀತ ಸಂಜೆಯ ಯಶಸ್ಸಿನ ಹಿಂದೆ ರಕ್ಷಣಾ ಮಂತ್ರಾಲಯದ ಜಂಟಿ ನಿರ್ದೇಶಕ ಎಸ್. ಹರಿಪ್ರಿಯ, ನವದೆಹಲಿಯ ರೈಲ್ವೆ ಇಲಾಖೆಯ ನವೀನ್ ಕುಮಾರ್, ಕರ್ನಾಟಕ ಭವನದ ವಸತಿ ಕಲ್ಯಾಣ ಸಮಿತಿಯ ಫೇಸ್–2 ರ ಅಧ್ಯಕ್ಷ ಹಾಗೂ ಕ್ರೀಯಾಶೀಲರೂ ಆದ ಸುಧಾಕರ್ ನಾಯಕ್, ಕಾರ್ಯದರ್ಶಿ ಹಾಗೂ ಅಲಂಕಾರ ಪ್ರವೀಣ, ಪರಿಸರ ಪ್ರಿಯ ಕೆ. ರವಿ ಹಾಗೂ ಸಂಗೀತ ಕಾರ್ಯಕ್ರಮದ ಮುಖ್ಯ ರೂವಾರಿ ಎಸ್. ಕುಮಾರ್ ದಂಪತಿ ಇವರೆಲ್ಲರೂ ಸ್ಥಳೀಯ ಕಲಾವಿದರನ್ನು ಒಟ್ಟುಗೂಡಿಸಿ, ಸಂಗೀತ ಕಾರ್ಯಕ್ರಮಕ್ಕೆ ಮೆರುಗು ತಂದರು. ದೆಹಲಿ ಕರ್ನಾಟಕ ಸಂಘದ ಎಲ್ಲಾ ಪದಾಧಿಕಾರಿಗಳು ಆಗಮಿಸಿ, ಗಣೇಶ ಪೂಜೆಯಲ್ಲಿ ಪಾಲ್ಗೊಂಡರು. ಆಂಜನೇಯ, ವೀಣಾ ಜಗದೀಶ್ ಹಾಗೂ ಫೇಸ್ 2ರ ಸಮುಚ್ಚಯದ ನಿವಾಸಿಗಳು ಈ ಕಾರ್ಯಕ್ರಮಕ್ಕೆ ಉದಾರ ಮನಸ್ಸಿನಿಂದ ಸಹಾಯ ಸಹಕಾರ ಒದಗಿಸಿ, ಕಾರ್ಯಕ್ರಮ ಯಶಸ್ವಿಗೊಳ್ಳಲು ಕಾರಣರಾದರು.

ಕಾರ್ಯಕ್ರಮದ ನಂತರ ರುಚಿ ಹಾಗೂ ಶುಚಿಯಾದ ಭೋಜನವನ್ನು ಶ್ರೀ ರಾಧಾಕೃಷ್ಣ ಅವರು ವ್ಯವಸ್ಥೆಗೊಳಿಸಿ, ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ನಂತರ ಎಲ್ಲಾ ಸಿಬ್ಬಂದಿ ಹಾಗೂ ಅವರ ಕುಟುಂಬದ ಸದಸ್ಯರೆಲ್ಲರೂ 'ಜುಡೋ' ಆಟವಾಡಿ ಬಹುಮಾನಗಳನ್ನು ಗೆದ್ದು, ಕ್ರೀಡಾ ಸ್ಫೂರ್ತಿ ಮೆರೆದರು.

**ಎಸ್. ಕುಮಾರ್**

## 'ಶ್ರೀ ಗಣೇಶ ಮಿತ್ರ ಮಂಡಳಿ'ಯಿಂದ ಗಣೇಶೋತ್ಸವ



ದೆಹಲಿಯಲ್ಲಿ ಅಬ್ದುಲ್ ಉಸ್ಮಾನ್ ಶರೀಫ ಅವರ ಅಧ್ಯಕ್ಷತೆಯ ಶ್ರೀ ಗಣೇಶ ಮಿತ್ರ ಮಂಡಳಿ ನವದೆಹಲಿ ಇವರ ವತಿಯಿಂದ 34ನೇ ವರ್ಷದ ಗಣೇಶೋತ್ಸವದ ಕಾರ್ಯಕ್ರಮವು ಆಗಸ್ಟ್ 31 ರಂದು ಬೆಳಿಗ್ಗೆ 8:30ಕ್ಕೆ ದೆಹಲಿಯ ರಾಮಕೃಷ್ಣ ಪುರಂನ ಸೆಕ್ಟರ್–12ರ ಸರ್ ಎಂ.ವಿಶ್ವೇಶ್ವರಯ್ಯ ಮೆಟ್ರೋ ನಿಲ್ದಾಣ ಮತ್ತು ದೆಹಲಿ ಕರ್ನಾಟಕ ಸಂಘದ ಮಧ್ಯೆ ಇರುವ ಅರಳಿಕಟ್ಟೆಯ ಬಳಿ ರಾಘವೇಂದ್ರಸ್ವಾಮಿ ಮಠದ ಅರ್ಚಕರಾದ ಶ್ರೀ ವಾಮನಾಚಾರ್ಯ ಅವರು ಶ್ರೀ ಗಣೇಶ ಪ್ರತಿಷ್ಠಾಪನೆ ಪೂಜೆಯನ್ನು ಮಂತ್ರೋಪದೇಶಗಳನ್ನು ಪಠಿಸುವ ಮೂಲಕ ನೆರವೇರಿಸಿದರು. ಈ ಪೂಜಾ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ನವೀನ್ ಕುಮಾರ್ ದಂಪತಿಗಳು ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀ ಗಣೇಶ ಮಿತ್ರಮಂಡಳಿಯ ಅಧ್ಯಕ್ಷರಾದ ಶ್ರೀ ಉಸ್ಮಾನ್ ಅಬ್ದುಲ್ ಶರೀಫ, ಕಾರ್ಯದರ್ಶಿ ಶಶಿಕಾಂತ ಪಾಟೀಲ್, ಸದಸ್ಯರಾದ ಟಿ.ಎಂ. ಮೈಲಾರಪ್ಪ, ಸಿ.ಆರ್. ಶ್ರೀನಿವಾಸ್, ಗಿರೀಶ್ ಎಸ್, ಹರಿಪ್ರಿಯ ಎಸ್, ಕೆ.ಆರ್. ರಾಮಮೂರ್ತಿ, ಹಿರಿಯ ಕನ್ನಡಿಗರಾದ ಶ್ರೀ ವಿ.ವಿ. ಬಿರಾದಾರ್ ಅವರು ಪಾಲ್ಗೊಂಡು ಶ್ರೀಗಣೇಶನ ಕೃಪೆಗೆ ಪಾತ್ರರಾದರು.

**ಅಶ್ವಿನಿ ಬಿ.ಎಸ್.**

# ದೆಹಲಿ ಕರ್ನಾಟಕ ಸಂಘದಿಂದ ಅಭಿಮತ ಸಂಪಾದಕ ಮಂಡಳಿ ಸದಸ್ಯ ಅಮರೇಶ ಎಸ್. ದೊಡಮನಿ ಅವರಿಗೆ ಗೌರವಯುತ ಬೀಳ್ಕೊಡುಗೆ



ಕರ್ನಾಟಕ ವಾರ್ತಾ ಇಲಾಖೆಯ ದೆಹಲಿ ಇಲಾಖೆಯಲ್ಲಿ ಸೇವೆ ಸಲ್ಲಿಸಿ ವರ್ಗಾವಣೆಗೊಂಡು ತಾಯ್ನಾಡಿಗೆ ಮರಳಿದ ಶ್ರೀ ಅಮರೇಶ ದೊಡಮನಿ ಅವರಿಗೆ ದೆಹಲಿ ಕರ್ನಾಟಕ ಸಂಘದಿಂದ ದಿನಾಂಕ 25.09.2022 ರಂದು ಆತ್ಮೀಯ ಗೌರವ ಸನ್ಮಾನ ನೀಡಿ ಬೀಳ್ಕೊಡಲಾಯಿತು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿಗಳಾದ ಆರ್. ರೇಣುಕುಮಾರ್, ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಶ್ರೀ ಅಮರೇಶರವರು ಸಂಘಕ್ಕೆ ಹಾಗೂ ಅಭಿಮತಕ್ಕೆ ನೀಡಿದ ಸೇವೆಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಈ ಸಂದರ್ಭದಲ್ಲಿ ನುಡಿದರು.

ದೆಹಲಿ ಕರ್ನಾಟಕ ಸಂಘದ ಮುಖವಾಣಿ 'ಅಭಿಮತ' ಮಾಸ ಸಂಚಿಕೆಯ ಪ್ರಧಾನ ಸಂಪಾದಕರಾದ ಎನ್.ಪಿ. ಚಂದ್ರಶೇಖರ್, ಸಂಪಾದಕ ಮಂಡಳಿ ಸದಸ್ಯರಾದ ಕೆ.ಎಸ್. ಮೂರ್ತಿ ಅವರು ಸಂಪಾದಕ ಮಂಡಳಿಯ ಸದಸ್ಯರಾಗಿ ಅಮರೇಶ್‌ರವರು ನೀಡಿದ ಸಹಕಾರವನ್ನು ಶ್ಲಾಘಿಸಿದರು. ಅವರ ಮುಂದಿನ ಬದುಕು ಸುಖಕರವಾಗಿರಲೆಂದು ಶುಭ ಕೋರಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅಮರೇಶ ಅವರು 'ಕಲಿಕೆ ನಿರಂತರ, ಅದು ಪ್ರವಹಿಸುವ ಜಲ' ಎಂಬಂತೆ ಹೊಸ ಹೊಸ ವಿಷಯ ಕಲಿಯಲು ನನಗೆ ಇದೊಂದು ಸದಾವಕಾಶವೇ ಆಗಿತ್ತು. ಈ ಒಂದು ವರ್ಷದ ಅವಧಿಯಲ್ಲಿ ಅಭಿಮತದಲ್ಲಿ ಕೆಲಸ ನಿರ್ವಹಿಸುವ ಸೌಭಾಗ್ಯ ನನ್ನ ಜೀವನದಲ್ಲಿ ಸದಾ ನೆನಪಿನಲ್ಲಿ ಉಳಿವಂತಹ ಸಂದರ್ಭ ಇದು. ವರದಿ, ಲೇಖನ ಬರೆಯುವ ಹಾಗೂ ಸರಿಪಡಿಸುವ ಪ್ರತಿಯೊಂದನ್ನು ನಿಗದಿತ ಕಾಲಮಿತಿಯಲ್ಲಿಯೇ ಸಿದ್ಧಪಡಿಸಿ ಸಂಪಾದಕರಿಗೆ ಒದಗಿಸಿ ಕೊಟ್ಟಿದ್ದೇನೆ. ಅಭಿಮತದ ಪ್ರಧಾನ ಸಂಪಾದಕರೂ ಸೇರಿದಂತೆ ಸಂಪಾದಕ ಮಂಡಳಿಯ ಸದಸ್ಯರಾದ ಹಿರಿಯರು ನನ್ನ ಹಿತೈಷಿಗಳು ಆದ ಕೆ.ಎಸ್. ಮೂರ್ತಿ, ಯಲ್ಲಾಲಿಂಗ ಕೊಪ್ಪದ ಅವರೊಂದಿಗೆ ಕಳೆದ ಒಂದು ವರ್ಷದ ಅವಧಿಯಲ್ಲಿ ತಾವು ಸಂಪಾದಕ ಮಂಡಳಿ ಸದಸ್ಯನಾಗಿ ಕಾರ್ಯ ನಿರ್ವಹಿಸಿದ್ದು ತೃಪ್ತಿ ತಂದಿದೆ ಎಂದರು. ದೆಹಲಿ ಕನ್ನಡಿಗರಿಂದ ಆಕರವಾಗಿರುವ ಲೇಖನಗಳನ್ನು ತಮ್ಮ ಅನುಭವದ ನೆಲೆಗಟ್ಟಿನಲ್ಲಿ ಮೌನವಾಗಿ ಕೆಲಸದಲ್ಲಿ ತೊಡಗಿಕೊಳ್ಳುವ ಮುಖವಾಣಿಯಲ್ಲಿ ಅಡವಳಿಸಿಕೊಳ್ಳುವ ವ್ಯಕ್ತಿಯೊಬ್ಬರು 'ಅಭಿಮತ'ದ ಬೆನ್ನೆಲುಬಾಗಿದ್ದಾರೆ ಅವರೇ ಕರ್ನಾಟಕ ಸಂಘದ ವ್ಯವಸ್ಥಾಪಕರಾದ ಶೇಖರ್ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು

ಅಭಿಮತ ಕಾರ್ಯದ ನನ್ನ ನೆನಪಿನಾಳದ ಬುತ್ತಿ ಬಿಚ್ಚಿದಷ್ಟು ಹೆಚ್ಚಾಗುತ್ತದೆ. ಬುತ್ತಿಯಾದ್ರೂ ಬಿಚ್ಚಬಹುದು ಎತ್ತಲಾರದಷ್ಟು ಉಣ್ಣಬಹುದು. ಅರವು ಎಂಬ ಅರಿವೆಯ ಹಾಸಿ, ಅರವು ಹಾಲ್ಮೊಸರವ ಸೋಸಿ ಎಂಬ ದಾರ್ಶನಿಕರ ನುಡಿ ಇಲ್ಲಿ ಉಲ್ಲೇಖನೀಯ. ಅಭಿಮತ ಸಂಚಿಕೆ ಇನ್ನೂ ಮೌಲಿಕ ವಿಷಯವನ್ನೊಳಗೊಂಡು ಅತ್ಯುತ್ತಮ ಮಾಸಿಕ ಸಂಚಿಕೆಯಾಗಿ ಬೆಳೆಯಲಿ ಅದರ ಬೆಳಕು ಪಸರಿಸಲಿ ಎಂದು ಶುಭ ಹಾರೈಸುತ್ತೇನೆ. ತಮ್ಮೆಲ್ಲರ ಸಹಾಯ ಸಹಕಾರ ನನ್ನ ನೆನಪಿನಾಳದಲ್ಲಿ ಸದಾ ನೆಲೆ ನಿಲ್ಲುತ್ತದೆ ಎಂದು ಅಮರೇಶ ತಿಳಿಸಿದರು. ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಧನ್ಯವಾದಗಳನ್ನು ಸಮರ್ಪಿಸಿ, ಶುಭ ಹಾರೈಸಿ ಗೌರವಪೂರ್ವಕವಾಗಿ ಬೀಳ್ಕೊಡಲಾಯಿತು.

ದೆಹಲಿಯ ಸ್ಥಳೀಯ ಕಲಾವಿದರೂ ಕೂಡ ಸಂಗೀತ, ಗಾಯನ, ಕವನ, ಲಾವಣಿ ಪ್ರಸ್ತುತಿ ಮೂಲಕ ಅಮರೇಶ ಅವರನ್ನು ಬೀಳ್ಕೊಟ್ಟರು.

## ಕರ್ನಾಟಕ ವಾರ್ತಾ ಕೇಂದ್ರದಿಂದ ಅಮರೇಶ ಅವರಿಗೆ ಬೀಳ್ಕೊಡುಗೆ



ನವದೆಹಲಿಯ ಕರ್ನಾಟಕ ವಾರ್ತಾ ಕೇಂದ್ರದ ಕಚೇರಿಯಲ್ಲಿ ಕಳೆದ 20 ವರ್ಷಗಳಿಂದ ಕಾರ್ಯ ನಿರ್ವಹಿಸಿ, ಇದೀಗ ವರ್ಗಾವಣೆಗೊಂಡು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಿಜಯಪುರ ಜಿಲ್ಲೆಯ ಸಹಾಯಕ ನಿರ್ದೇಶಕರಾಗಿ ಪ್ರಭಾರ ವಹಿಸಿಕೊಳ್ಳಲು ತೆರಳುತ್ತಿರುವ ಶ್ರೀ ಅಮರೇಶ ಎಸ್ ದೊಡಮನಿ ಅವರಿಗೆ ಸೆಪ್ಟೆಂಬರ್ 29, 2022 ರಂದು ಆತ್ಮೀಯವಾಗಿ ಬೀಳ್ಕೊಡುಗೆ ನೀಡಲಾಯಿತು.

ಅಧಿಕೃತ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ನವದೆಹಲಿಗೆ ಆಗಮಿಸಿದ್ದ ಇಲಾಖೆಯ ಜಂಟಿ ನಿರ್ದೇಶಕ ಶ್ರೀ ಡಿ.ಪಿ. ಮುರಳೀಧರ್ ಅವರು ಈ ಸಂದರ್ಭದಲ್ಲಿ ಅಮರೇಶ ಅವರನ್ನು ಸನ್ಮಾನಿಸಿ ಸತ್ಕರಿಸಿದರು. ಅಲ್ಲದೆ, ವಿಜಯಪುರದ ಕಾರ್ಯ ನಿರ್ವಹಣೆಯಲ್ಲಿ ಅಮರೇಶ ಅವರು ಸರ್ವ ರೀತಿಯಲ್ಲೂ ವಿಜಯಿಯಾಗಲಿ ಎಂದು ಶುಭ ಹಾರೈಸಿದರು.

ಕರ್ನಾಟಕ ವಾರ್ತಾ ಕೇಂದ್ರದ ಸಹಾಯಕ ನಿರ್ದೇಶಕಿ ಎಂ. ಶಾಲಿನಿ, ವಿಜಯ ಕುಮಾರ್ ಆರ್ ತೋರಗಲ್ ಹಾಗೂ ಗೀತಾ ಮತ್ತು ಕರ್ನಾಟಕ ಭವನದ ಬಿ. ನಾರಾಯಣ, ವೈಭವ ದೇಸಾಯಿ, ಸುಮನ್ ದೇಸಾಯಿ, ರಾಜೇಶ್ವರಿ ತಿವಾರಿ ಹಾಗೂ ಅಂಜನಾ ಕಟ್ಟಿಮನಿ ಅವರು ಈ ಸರಳ ಸಮಾರಂಭದಲ್ಲಿ ಹಾಜರಿದ್ದು, ಅಮರೇಶ ಅವರಿಗೆ ಅಭಿನಂದಿಸಿ, ಒಳಿತಾಗಲಿ ಎಂದು ಶುಭ ಕೋರಿದರು.

# ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಐಎಸ್‌ಎನ್ ಭಟ್ ಅವರಿಗೆ ಆತ್ಮೀಯ ಬೀಳ್ಕೊಡುಗೆ



ದೆಹಲಿಗೆ ವೃತ್ತಿ ಜೀವನಕ್ಕಾಗಿ ಬಂದು 40 ವರ್ಷಗಳನ್ನು ಕಳೆದು ಇದೀಗ ತಾಯ್ನಾಡಿಗೆ ಮರಳುತ್ತಿರುವ ಸಂದರ್ಭದಲ್ಲಿ ಶ್ರೀ ಐ.ಎಸ್.ಎನ್. ಭಟ್ ಅವರನ್ನು ದಿನಾಂಕ 25.09.2022ರಂದು ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಆತ್ಮೀಯವಾಗಿ ಬೀಳ್ಕೊಟ್ಟರು. ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮ ಮತ್ತು ಚಟುವಟಿಕೆಗಳಲ್ಲಿ ಇವರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಅವರ ಮುಂದಿನ ತಾಯ್ನಾಡಿನ ಜೀವನ ಸುಖಕರವಾಗಿರಲಿ ಎಂದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭ ಹಾರೈಕೆಗಳು.

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಬಿ.ಕೆ. ಬಸವರಾಜು ಆಯ್ಕೆ


ಬಿ.ಕೆ. ಬಸವರಾಜು
ಅಧ್ಯಕ್ಷರು


ಡಾ. ಅವನೀಂದ್ರನಾಥ್ ರಾವ್
ಉಪಾಧ್ಯಕ್ಷ


ವೀಣಾ ಎಂ. ಜಗದೀಶ
ಉಪಾಧ್ಯಕ್ಷೆ



ಟಿ.ಎಂ. ಮೈಲಾರಪ್ಪ
ಗೌರವ ಕಾರ್ಯದರ್ಶಿ


ಕಾಶೀನಾಥ್ ಬಿರಾದಾರ
ಗೌರವ ಖಜಾಂಚಿ


ಡಾ. ವೆಂಕಟಾಚಲ ಹೆಗಡೆ
ಸದಸ್ಯರು


ಕೆ. ರಾಧಾಕೃಷ್ಣ
ಸದಸ್ಯರು


ವಸಂತ ಶೆಟ್ಟಿ ಬೆಳ್ಳಾರೆ
ಸದಸ್ಯರು


ಡಾ. ಅಶೋಕ ಗೋನಾಲ್
ಸದಸ್ಯರು


ರಮ್ಯಾ ಆರ್.ಎಸ್.
ಸದಸ್ಯರು


ಬಿ.ಆರ್. ಉಮೇಶ್
ಸದಸ್ಯರು


ಸಂತೋಷ ಕೆ.ಕೆ.
ಸದಸ್ಯರು


ಗಿರೀಶ್ ಎಸ್.
ಸದಸ್ಯರು


ಹರಿಪ್ರಿಯಾ ಎಸ್.
ಸದಸ್ಯರು


ಬಿ.ಎನ್. ಮೋಹನ್ ಕುಮಾರ್
ಸದಸ್ಯರು

ದೆಹಲಿಯ ಪ್ರತಿಷ್ಠಿತ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಹಿರಿಯ ಕನ್ನಡಿಗ, ದೆಹಲಿ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷ ಬಿ.ಕೆ. ಬಸವರಾಜು ಆಯ್ಕೆ ಯಾಗಿದ್ದಾರೆ. ದಿನಾಂಕ 18.09.2022ರಂದು ವಾರ್ಷಿಕ ಮಹಾಸಭೆ ಏರ್ಪಡಿಸಲಾಗಿತ್ತು ಮತ್ತು 2022–24ರ ಅವಧಿಗೆ ನೂತನ ಆಡಳಿತ ಮಂಡಳಿ ಆಯ್ಕೆಗಾಗಿ ಚುನಾವಣೆ ನಡೆದಿತ್ತು. ಉಪಾಧ್ಯಕ್ಷರಾಗಿ ಡಾ. ಅವನೀಂದ್ರನಾಥ್ ರಾವ್ ಹಾಗೂ ಶ್ರೀಮತಿ ವೀಣಾ ಎಂ. ಜಗದೀಶ್, ಹಿರಿಯ ರಂಗಕರ್ಮಿ ಮತ್ತು ಈ ಹಿಂದೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಖಜಾಂಚಿ ಮತ್ತು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಟಿ.ಎಂ. ಮೈಲಾರಪ್ಪ ಗೌರವ ಕಾರ್ಯದರ್ಶಿಯಾಗಿ, ಶಾಲೆಯ ಹಳೆ ವಿದ್ಯಾರ್ಥಿಯಾಗಿದ್ದ ಕಾಶೀನಾಥ್ ಬಿರಾದಾರ ಅವರು ಗೌರವ ಖಜಾಂಚಿ ಯಾಗಿಯೂ ಆಯ್ಕೆಯಾಗಿದ್ದಾರೆ.

ಶಿಕ್ಷಣ ಸಂಸ್ಥೆಯ ನಿಕಟಪೂರ್ವ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆಯವರು ಬಸವರಾಜು ತಂಡವನ್ನು ಬೆಂಬಲಿಸಿ ಆಡಳಿತ ಮಂಡಳಿಗೆ ಸದಸ್ಯರಾಗಿ ಆಯ್ಕೆಯಾಗಿದ್ದು ವಿಶೇಷ. ದೆಹಲಿ ಕರ್ನಾಟಕ ಸಂಘದ ಹಾಲಿ ಕೋಶಾಧಿಕಾರಿ ಕೆ. ರಾಧಾಕೃಷ್ಣ, ಗಿರೀಶ್ ಎಸ್., ಹರಿಪ್ರಿಯಾ ಎಸ್, ಕುಮಾರಿ ರಮ್ಯಾ ಆರ್.ಎಸ್., ಬಿ.ಆರ್. ಉಮೇಶ್, ಡಾ. ಅಶೋಕ್ ಗೋನಾಲ್, ಸಂತೋಷ ಕೆ.ಕೆ. ಹಾಗೂ ಬಿ.ಎನ್. ಮೋಹನ್ ಕುಮಾರ್ ಅವರುಗಳು ಸದಸ್ಯರಾಗಿ ಆಯ್ಕೆ ಆಗುವುದರ ಮೂಲಕ ಬಸವರಾಜು ನೇತೃತ್ವ ವಹಿಸಿದ್ದ ತಂಡದ ಎಲ್ಲ 15 ಮಂದಿ ಆರಿಸಿ ಬಂದು ಐತಿಹಾಸಿಕ ಗೆಲುವನ್ನು ಕಂಡಿದೆ. ದೆಹಲಿಯ ಆರ್.ಕೆ. ಪುರಂ ಶಾಖೆಯ ಕರ್ನಾಟಕ ಬ್ಯಾಂಕಿನ ಹಿರಿಯ ವ್ಯವಸ್ಥಾಪಕರಾಗಿರುವ ಗುರುಲಿಂಗಪ್ಪ ಎಂ. ವಿಜಾಪುರ ಅವರು ಚುನಾವಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು.

**ಟಿ.ಎಂ. ಮೈಲಾರಪ್ಪ**

# ಭಾವನೆಗಳ ಅರಿವಿಗೆ ಭಾಷೆಯೇ ಸಾಧನ -ಸಚಿವ ಬಿ.ಸಿ. ನಾಗೇಶ್



ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಭಾಷೆ ಬಹಳ ಮುಖ್ಯ ಎಂಬುವುದು ಅನೇಕ ಸಂಶೋಧನೆಗಳಲ್ಲಿ ಸಾಬೀತಾಗಿದೆ. ಅದರಲ್ಲಿಯೂ ವಿಶೇಷವಾಗಿ ಭಾರತೀಯ ಭಾಷೆಗಳಷ್ಟು ಸತ್ವಯುತವಾದ ಭಾಷೆಗಳು ಬೇರೆ ಇಲ್ಲ ಎನ್ನಬಹುದು. ಮನುಷ್ಯನ ಭಾವನೆಗಳ ಅರಿವಿಗೆ ಭಾಷೆಯೇ ಸಾಧನ ಎಂದು ಕರ್ನಾಟಕ ಸರಕಾರದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಬಿ.ಸಿ. ನಾಗೇಶ್ ಅವರು ಹೇಳಿದರು. ಅವರು ದಿನಾಂಕ 28.09.2022ರಂದು ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿ ಆಡಳಿತ ಮಂಡಳಿ ಹಾಗೂ ಶಿಕ್ಷಕರನ್ನು ಉದ್ದೇಶಿಸಿ ಮಾತನಾಡುತ್ತಾ ರಾಷ್ಟ್ರ ರಾಜಧಾನಿಯಲ್ಲಿ ಕನ್ನಡ ಭಾಷೆಯ ಬೆಳವಣಿಗೆಯ ಹಿತದೃಷ್ಟಿಯಿಂದ 1959ರಲ್ಲಿ ಹಿರಿಯರು ಸ್ಥಾಪಿಸಿದ ಈ ಸಂಸ್ಥೆಯನ್ನು ಅದೇ ಆಶೋತ್ತರಗಳಿಂದ ಮುನ್ನಡೆಸುತ್ತಾ ಹಿರಿಯರ ಕನಸುಗಳನ್ನು ನನಸು ಮಾಡುತ್ತಿರುವ ಆಡಳಿತ ಮಂಡಳಿಯ ಕಾರ್ಯ ಸ್ತುತ್ಯಾರ್ಹವಾದುದು. ಗ್ರಾಮ ಸಭೆಗಳ ಮಟ್ಟದಲ್ಲಿಯೂ ಸಹಿತ ಚರ್ಚಿಸಿ ಅಂತಿಮವಾಗಿ ಜಾರಿಗೆ ತಂದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾತೃಭಾಷೆಗೆ ಮಹತ್ವವನ್ನು ನೀಡಲಾಗಿದೆ. ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯಲ್ಲಿಯೇ ನಡೆಯಬೇಕೆಂದು ಇಂದು ಚರ್ಚೆಯಾಗುತ್ತಿದೆ. ಆದರೆ ನಮ್ಮ ಹಿರಿಯರು ಇದೇ ಆಶಯವನ್ನು ಹೊತ್ತು 1959ರಲ್ಲಿಯೇ ಈ ಸಂಸ್ಥೆಯನ್ನು ಹುಟ್ಟು ಹಾಕಿರುವುದು ಶ್ಲಾಘನೀಯ. ಇಂದು ಶಿಕ್ಷಣವು ಜ್ಞಾನಾರ್ಜನೆಯನ್ನು ಬಿಟ್ಟು ಉದ್ಯೋಗ ಮಾರ್ಗದತ್ತ ಆಕರ್ಷಿತವಾಗಿರುವುದು ಅಪಾಯಕಾರಿ. ಕೊರೊನಾದ ನಂತರ ಮಕ್ಕಳ ಕಲಿಕೆಯಲ್ಲಿ ಉಂಟಾಗಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಕಲಿಕಾ ಚೇತರಿಕೆಯಂತಹ ಅನೇಕ ಕಾರ್ಯಕ್ರಮಗಳನ್ನು, ಪ್ರಯತ್ನಗಳನ್ನು ಕರ್ನಾಟಕ ಸರಕಾರವು ರೂಪಿಸಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ನೂತನ ಅಧ್ಯಕ್ಷರಾದ ಬಿ.ಕೆ. ಬಸವರಾಜು, ಗೌರವ ಕಾರ್ಯದರ್ಶಿ ಟಿ.ಎಂ. ಮೈಲಾರಪ್ಪ, ಆಡಳಿತ ಮಂಡಳಿ ಸದಸ್ಯರಾದ ಗಿರೀಶ್ ಎಸ್., ಹರಿಪ್ರಿಯಾ ಎಸ್, ಡಾ. ಅಶೋಕ್ ಗೋನಾಲ್, ಬಿ.ಎನ್. ಮೋಹನ್ ಕುಮಾರ್, ಕರ್ನಾಟಕ ಭವನದ ಅಧಿಕಾರಿ ಆರ್. ರೇಣುಕುಮಾರ್, ದೆಹಲಿ ಕನ್ನಡ ಶಾಲೆಯ ಉಪ ಪ್ರಾಂಶುಪಾಲರಾದ ಸೌಮ್ಯ ಎನ್.ಎಂ. ಹಾಗೂ ಶಾಲೆಯ ಶಿಕ್ಷಕ–ಶಿಕ್ಷಕೇತರ ವೃಂದದವರು ಉಪಸ್ಥಿತರಿದ್ದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್ ಸ್ವಾಗತಿಸಿದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಸಮಿತಿ ಸದಸ್ಯರಾದ ಉಮೇಶ್ ಬಿ.ಆರ್. ವಂದಿಸಿದರು. ಕನ್ನಡ ಶಿಕ್ಷಕರಾದ ಅರವಿಂದ ಬಿಜ್ಜೈ ಕಾರ್ಯಕ್ರಮ ನಿರೂಪಿಸಿದರು.

**ಅರವಿಂದ ಬಿಜ್ಜೈ**

# ಸರ್.ಎಂ. ವಿಶ್ವೇಶ್ವರಯ್ಯ ಸ್ಮರಣೆ



ಶಿಕ್ಷಣ ತಜ್ಞರಾಗಿ, ಕೈಗಾರಿಕಾ ಕ್ರಾಂತಿಯ ಹರಿಕಾರರಾಗಿ ಶ್ರೇಷ್ಠ ಇಂಜಿನಿಯರ್ ಆಗಿ ದೇಶಕ್ಕೆ ಮಹತ್ತರ ಸೇವೆ ಹಾಗೂ ಭಾರತೀಯರು ಮರೆಯದ ಧೀಮಂತ ಕನ್ನಡಿಗ ಸರ್.ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನಾಚರಣೆ ಕಾರ್ಯಕ್ರಮವನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ಜಿ.ಪಿ. ರಾಜರತ್ನಂ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಸರ್.ಎಂ. ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ಮಾತನಾಡಿದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್ ಅವರು ಭಾರತ ರತ್ನ ಪಡೆದ ಮೊದಲ ಕನ್ನಡಿಗ ಎಂಬ ಹೆಗ್ಗಳಿಕೆ ಪಡೆದ ವಿಶ್ವೇಶ್ವರಯ್ಯ ಅವರ ಪ್ರಾಮಾಣಿಕತೆ, ದಕ್ಷತೆ, ಸರಳ ಹಾಗೂ ಆದರ್ಶ ಬದುಕು ಮಾದರಿಯಾದುದು. ವಿಶ್ವ ಕಂಡ ಅತ್ಯುತ್ತಮ ಅಭಿಯಂತರರಾಗಿ ತುಂಬು ಜೀವನವನ್ನು ನಡೆಸಿ ತಮ್ಮ ಸಾಧನೆಯ ಮೂಲಕ ಕನ್ನಡ ನಾಡಿನ ಕೀರ್ತಿಯನ್ನು ಜಗತ್ತಿಗೆ ಪಸರಿಸಿದವರು. ಬ್ರಿಟಿಷ್ ಸರಕಾರದಿಂದ 'ಸರ್' ಬಿರುದನ್ನು, ಭಾರತ ಸರ್ಕಾರದಿಂದ ಭಾರತ ರತ್ನ ಪ್ರಶಸ್ತಿ ಪಡೆದ ಇವರ ಸೇವೆ ಪ್ರಾತಃಸ್ಮರಣೀಯ. ವಿದ್ಯಾರ್ಥಿಗಳು ಇವರ ಜೀವನದ ಆದರ್ಶಗಳನ್ನು ಮೈಗೂಡಿಸಿಕೊಂಡು ಉನ್ನತ ಸಾಧನೆ ಮಾಡಬೇಕೆಂದು ಹೇಳಿದರು.

ಶಾಲೆಯ ಉಪಪ್ರಾಂಶುಪಾಲರಾದ ಸೌಮ್ಯ ಎನ್.ಎಂ. ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಶಿಕ್ಷಣ, ಕೈಗಾರಿಕೆ, ಸಾಹಿತ್ಯ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದ ವಿಶ್ವೇಶ್ವರಯ್ಯ ಅವರನ್ನು ಕೇವಲ ಇಂಜಿನಿಯರುಗಳು ಮಾತ್ರ ನೆನೆಯುವುದಲ್ಲ, ಭಾರತೀಯರೆಲ್ಲರೂ ಅವರನ್ನು ಸ್ಮರಿಸಿಕೊಳ್ಳಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ಕಾಲದಲ್ಲಿಯೂ ಸೇವೆಯನ್ನು ಸಲ್ಲಿಸಿ ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ಹೊಸ ಯೋಚನೆ, ಯೋಜನೆಗಳಿಂದ ಆಧುನಿಕ ಭಾರತದ ನಿರ್ಮಾಣ ಶಿಲ್ಪಿಯಾದರು. ಇಂತಹ ಮಹಾನ್ ವ್ಯಕ್ತಿತ್ವದ ವಿಶ್ವೇಶ್ವರಯ್ಯ ಅವರನ್ನು ತಿಳಿದು ಅವರ ಬದುಕಿನ ಆದರ್ಶ ಗುಣಗಳನ್ನು ವಿದ್ಯಾರ್ಥಿಗಳೆಲ್ಲರೂ ಅನುಸರಿಸಬೇಕು ಎಂದು ಹೇಳಿದರು.

ಸರ್.ಎಂ. ವಿಶ್ವೇಶ್ವರಯ್ಯ ಅವರ ಜೀವನ ಕುರಿತಾದ ಅರವಿಂದ ಬಿಜ್ಜೈ ಅವರು ರಚಿಸಿದ ಆಶಯ ಗೀತೆಯನ್ನು ವಿದ್ಯಾರ್ಥಿಗಳು ಪ್ರಸ್ತುತಪಡಿಸಿದರು. ವಿಶ್ವೇಶ್ವರಯ್ಯ ಅವರ ಸಂಕ್ಷಿಪ್ತ ಪರಿಚಯವನ್ನು ಕು. ಸುಮಂತ್ ಆಚಾರ್ಯ ಅವರು, ವಿಶ್ವೇಶ್ವರಯ್ಯ ಅವರ ಆದರ್ಶ ಜೀವನದ ಕುರಿತಾಗಿ ಕು. ಜಯಶ್ರೀ ಅವರು ಹಾಗೂ ವಿಶ್ವೇಶ್ವರಯ್ಯ ಅವರ ನುಡಿಮುತ್ತುಗಳನ್ನು ಪ್ರಾಥಮಿಕ ಶಾಲಾ ವಿಭಾಗದ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದರು. ಕಾರ್ಯಕ್ರಮದಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರಾದ ನಾಗರಾಜ್ ಎಂ. ಹಾಗೂ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕನ್ನಡ ಶಿಕ್ಷಕರಾದ ಅರವಿಂದ ಬಿಜ್ಜೈ ಸ್ವಾಗತಿಸಿದರು. ಪ್ರಾಥಮಿಕ ಶಾಲಾ ವಿಭಾಗದ ಸಹ ಶಿಕ್ಷಕಿಯಾದ ಸುನೀತಾ ಎನ್.ಜೆ. ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

**ಅರವಿಂದ ಬಿಜ್ಜೈ**

# ಪರಸ್ಪರ ಪ್ರೀತಿ ವಿಶ್ವಾಸಗಳಿಗೆ ಬುನಾದಿಯಾಗಲು ಪೂರಕವಾದ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಕಾರ್ಯಕ್ರಮ - ಶ್ರೀ ಅಮರೇಶ್ವರ ಪಾಟೀಲ್



ನವದೆಹಲಿಯ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಮೂಲಕ ದೆಹಲಿಯ ಶ್ರೀನಿವಾಸಪುರಿಯ ಸತ್ಯ ಜೀವನ ಕುಷ್ಠ ರೋಗಿ ಆಶ್ರಮದಲ್ಲಿ ಸೆಪ್ಟೆಂಬರ್ 25 ರಂದು ಹಮ್ಮಿಕೊಂಡಿದ್ದ '33ನೇ ಸಾಮಾಜಿಕ ಸುಧಾರಣಾ ದಿವಸ' ಕಾರ್ಯಕ್ರಮವನ್ನು ಉದ್ಘಾಟಿಸಿದ ಕೇಂದ್ರ ರಾಸಾಯನಿಕ, ರಸಗೊಬ್ಬರ ಹಾಗೂ ನವೀಕರಿಸಬಹುದಾದ ಇಂಧನ ಖಾತೆಯ ರಾಜ್ಯ ಸಚಿವರಾದ ಮಾನ್ಯ ಶ್ರೀ ಭಗವಂತ ಖೂಬಾ ಅವರ ಆಪ್ತ ಕಾರ್ಯದರ್ಶಿಗಳೂ ಆದ ಶ್ರೀ ಅಮರೇಶ್ವರ ಪಾಟೀಲ್ ಅವರು ಮಾತನಾಡಿ ನಮ್ಮ ಕನ್ನಡಿಗರೇ ಇರುವ ಕುಷ್ಠ ರೋಗಿ ಆಶ್ರಮ ಲಾಜಪತ್ ನಗರದಲ್ಲಿ ವಾಸವಾಗಿರುವ ಎಲ್ಲ ಕಡು ಬಡವರ ಮಕ್ಕಳನ್ನು ಒಂದು ಕಡೆ ಕರೆ ತಂದು ನಮ್ಮ ನಿಮ್ಮೆಲ್ಲರ ಪರಸ್ಪರ ಪ್ರೀತಿ ವಿಶ್ವಾಸ ಬೆಳೆಸಲು ಪೂರಕವಾಗಿ ಇಂಥ ಕಾರ್ಯಕ್ರಮಗಳು ಸಹಾಯಕವಾಗಿವೆ ಎಂದರು.

ಸರ್ಕಾರದಿಂದ ಬಡವರಿಗೆ ಅನೂಕೂಲವಾಗುವ ಹಲವು ಕಾರ್ಯಕ್ರಮಗಳಿದ್ದು, ಇದರ ಸದುಪಯೋಗ ಪಡಿಸಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ತಿಳಿಸಿದರು. ಎಲೆಮರೆಯ ಕಾಯಿಯಾಗಿ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವ ವಿ.ವಿ. ಬಿರಾದಾರ್ ಅವರ ಕಾರ್ಯ ಸ್ತುತ್ಯಾರ್ಹವಾಗಿದೆ ಎಂದರು. ಹಾಗೂ ಬಡ ಕನ್ನಡಿಗರ ಕುಟುಂಬಕ್ಕೆ ಸಹಾಯ-ಸಹಕಾರದ ಭರವಸೆ ನೀಡಿದರು. ಸುಮಾರು ನಾಲ್ವತ್ತೆಂಟು ವರುಷಗಳ ಕಾಲ ಬಡವರ ಹಾಗೂ ಅಶಕ್ತರ ಆಶೋತ್ತರಗಳ ಈಡೇರಿಕೆಗಾಗಿ ಹಾಗೂ ಅವರ ಶ್ರೇಯೋಭಿವೃದ್ಧಿಗಾಗಿ ಈ ಸಂಸ್ಥೆ ಶ್ರಮಿಸುತ್ತಿದೆ. ಕರ್ನಾಟಕದಿಂದ ಗದಗ ತೊಂಟದಾರ್ಯ ಸ್ವಾಮಿಗಳು, ನಾಗನೂರು ಸ್ವಾಮಿಗಳು, ಇಳಕಲ್ಲ ಮಹಾಂತ ಸ್ವಾಮಿಗಳು, ಬಸವಲಿಂಗ ಪಟ್ಟದ್ದೇವರು, ದೆಹಲಿ ಸರ್ಕಾರದಲ್ಲಿ ಉನ್ನತ ಹುದ್ದೆಯ ಭಾರತೀಯ ಆಡಳಿತ ಸೇವೆಯ ಅಧಿಕಾರಿಗಳೂ ಆದ ಅಮರನಾಥ ತಲವಾಡೆ ಇನ್ನೂ ಅನೇಕ ಪ್ರಮುಖರನ್ನು ಆಹ್ವಾನಿಸಿ, ಇಲ್ಲಿನ ನಿವಾಸಿಗಳ ಮನೋಬಲ, ಆತ್ಮ ಸ್ಥೈರ್ಯ ಹೆಚ್ಚಿಸುವ ನಿಟ್ಟಿನಲ್ಲಿ ಈ ಸಂಸ್ಥೆಯಿಂದ ಪ್ರಯತ್ನ ನಡೆದಿದೆ. ಅದರಂತೆ, ತಮ್ಮನ್ನು ಈ ಸಭೆಗೆ ಆಹ್ವಾನಿಸಿ, ಮನ್ನಣೆ ನೀಡಿದ ನವದೆಹಲಿಯ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಸಂಚಾಲಕರಿಗೆ ಹಾಗೂ ಪದಾಧಿಕಾರಿಗಳಿಗೆ ಧನ್ಯವಾದ ಅರ್ಪಿಸಿದರು.

ನವದೆಹಲಿಯ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೈಜಿನಾಥ ವಿ. ಬಿರಾದಾರ್ ಅತಿಥಿಗಳನ್ನು ಸ್ವಾಗತಿಸಿ ಹಾಗೂ ಪ್ರಾಸ್ತಾವಿಕವಾಗಿ ಮಾತನಾಡಿ, ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯನ್ನು 1931 ರಂದು ಫಕೀರಪ್ಪ ಮುರಗೋಡ ಅವರು ರಾಮದುರ್ಗದಲ್ಲಿ ಹುಟ್ಟು ಹಾಕಿದರು. ಇವರು ಅಪ್ಪಟ ಬಸವ ಭಕ್ತರಾಗಿದ್ದರು. ಕೊರಳಲ್ಲಿ ಲಿಂಗ ಹಣೆಯ ಮೇಲೆ ವಿಭೂತಿ ಧರಿಸುತ್ತಿದ್ದರು. ಶಾಲಾ ಮುಖ್ಯೋಪಾಧ್ಯಾಯರಾಗಿದ್ದ ಇವರು, ಸಮಾಜಸೇವೆಯಲ್ಲಿಯೇ ತಮ್ಮ ಪೂರ್ತಿ ಜೀವನ ಮುಡಿಪಾಗಿಟ್ಟು, ಓರ್ವ ಶ್ರೇಷ್ಠ ಸಂತನಾಗಿ ಸೇವೆ ಸಲ್ಲಿಸಿದರು. ತಂದೆ ಹಾಕಿದ ಪಥದಲ್ಲಿ ದಿವಂಗತ

ಈಶ್ವರಪ್ಪ ಮುರಗೋಡ ಮತ್ತು ಭೀಮರಾವ ಮುರಗೋಡ ಅವರು ನಡೆದರು. 'ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ'ಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಒಂದು ತಂಡದಲ್ಲಿದ್ದರು. ಇಂದಿಗೆ 33 ವರುಷವಾಯಿತು. ತಾವು ಈ ಹಿಂದಿನಿಂದಲೂ ಇಲ್ಲಿ ಸಂಚಾಲಕ ಮತ್ತು ಕಾರ್ಯದರ್ಶಿಯಾಗಿ ಸತತ ಕಾರ್ಯ ನಿರ್ವಹಿಸುತ್ತಿರುವುದು ದಿ. ಮುರಗೋಡ ಅವರ ಕೃಪಾಶೀರ್ವಾದ ಎಂದು ಹೇಳಿದರು.

ಸಧ್ಯ ಶಾಲನ್ ಮುರಗೋಡ ಅವರು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದು ಇಂದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿಲ್ಲವಾದರೂ ಶುಭ ಸಂದೇಶ ನೀಡಿದ್ದಾರೆ.

ಇದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಶೈಲಿ ಅದರ ಸಮಾಜಮುಖಿ ಕಾರ್ಯಗಳು ಮತ್ತು ಜನಪರ ಕಾರ್ಯಕ್ರಮಗಳು ಹಾಗೂ ಯಶಸ್ಸಿನ ಕುರಿತಾಗಿ ಬಿರಾದಾರ ಬಣ್ಣಿಸಿದರು.

ದಿವ್ಯ ಸಾನಿಧ್ಯ ವಹಿಸಿದ್ದ ಸರ್ವಶ್ರೀ ಆಚಾರ್ಯ ಡಾ. ಸಾಧ್ವಿ ಅವರು, ಈ ಸಂಸ್ಥೆಯು ಬಡವರ ಕಲ್ಯಾಣಕ್ಕಾಗಿ ಅನುಪಮ ಕಾರ್ಯಕ್ರಮಗಳನ್ನು ಈ ಹಿಂದಿನಿಂದ ಮಾಡುತ್ತಾ ಬಂದಿದೆ. ಇಂಥ ಕಾರ್ಯಕ್ರಮಕ್ಕೆ ಕರ್ನಾಟಕ ಸಂಘವು ಮುಕ್ತವಾಗಿ ಸಹಾಯ ನೀಡಿರುವುದು ಮಾನವ ಕಲ್ಯಾಣದ ಒಂದು ಅವಿಸ್ಮರಣೀಯ ಕಾರ್ಯಕ್ರಮ. ಇಂಥ ಪವಿತ್ರ ಕಾರ್ಯಗಳನ್ನು ಎಲ್ಲಾ ಕಡೆ ಅದರಲ್ಲೂ ಬಡವರು ವಾಸಿಸುವಲ್ಲಿ ಏರ್ಪಡಿಸಬೇಕು.ಇದು 'ಕುಷ್ಠ ಆಶ್ರಮ' ಬದಲಿಗೆ, 'ಸತ್ಯ ಜೀವನ' ಆಶ್ರಮವಾಗಿ ಬೆಳೆಯಲಿ ಎಂದು ಆಶೀರ್ವಚನ ನೀಡಿದರು.

ಗೌರವ ಉಪಸ್ಥಿತರಿದ್ದ ಪೂಜ್ಯ ಶ್ರೀ ಸರ್ವಮಂಗಳ ಮಾತಾಜಿ ಮಾತಾಡಿ, ವಿನೂತನ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ಸಂತೊಷವಾಗಿದೆ. ಎಲ್ಲರಿಗೂ ಒಳಿತಾಗಲಿ. ಈ ಸಂಸ್ಥೆಯ ಪದಾಧಿಕಾರಿಗಳು ಹಾಗು ಸದಸ್ಯರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರಿಗೆ ಬಸವ ಕಾಯಕ ಪ್ರಶಸ್ತಿ ನೀಡಿದ್ದು ಆನಂದವಾಯಿತು. ಪ್ರಶಸ್ತಿ ಪುರಸ್ಕೃತರು ಇನ್ನೂ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಳ್ಳಲಿ ಎಂದರು. ಎಲ್ಲರೂ ಒಂದಾಗಿ ಬಾಳಿ ಎಂದು ಆಶಿರ್ವಚನ ನೀಡಿದರು.

ಧಿವ್ಯ ಸಾನಿಧ್ಯ ವಹಿಸಿದ ಆಚಾರ್ಯ ಡಾ. ಸಾಧ್ವಿ ಸಾಧನೈ, ಆಚಾರ್ಯ ಸುಶೀಲ್ ಮುನಿ ಆಶ್ರಮ, ಪೂಜ್ಯ ಶ್ರೀ ಸರ್ವಮಂಗಳ ಮಾತಾಜಿ, ಬಸವ ಮಂಟಪ ಮಾತಾ ಆಶ್ರಮ ಹಾಗೂ ಗಣ್ಯರು ಜಗಜ್ಯೋತಿ ಬಸವೇಶ್ವರ ಅವರ ಭಾವಚಿತ್ರಕ್ಕೆ ಪುಷ್ಪ ಪೂಜೆ ಮಾಲಾರ್ಪಣೆ ಸಲ್ಲಿಸಿದ ನಂತರ ಎಲ್ಲರೂ ನಮನ ಸಲ್ಲಿಸಿದರು.

ಈ ಕಾರ್ಯಕ್ರಮದ ಅಂಗವಾಗಿ ಸಂತ ಶಿಶುನಾಳ ಶರೀಫ್, ಜಗಜ್ಯೋತಿ ಬಸವೇಶ್ವರ, ಭಗವಾನ್ ಬುದ್ಧ, ಭಗವಾನ್ ಮಹಾವೀರ, ಸಂತ ಕಬೀರ, ಗುರುನಾನಕ, ಸಂತ ರವಿದಾಸ್, ಹಾಗೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕುರಿತ ವಿಚಾರ ಗೋಷ್ಠಿ, ಕಥೆ, ಕವನ, ಪ್ರಾರ್ಥನಾ ಗೀತೆ ಭಜನೆ–ಕೀರ್ತನಾ ಕಾರ್ಯಕ್ರಮ ನಡೆದವು.

**ಬಸವ ಕಾಯಕ ಪ್ರಶಸ್ತಿ ಪ್ರಧಾನ :** ನವದೆಹಲಿಯ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯು ಈ ಬಾರಿ ಕೊಡಮಾಡುವ 'ಬಸವ ಕಾಯಕ' ಪ್ರಶಸ್ತಿಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರಿಗೆ ಈ ಕಾರ್ಯಕ್ರಮದಲ್ಲಿ ಗಣ್ಯರಿಂದ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ಸ್ಮರಣ ಫಲಕ, ಅಭಿನಂದನಾ ಪತ್ರ ಒಳಗೊಂಡಿದೆ.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ್ ಮಾತನಾಡಿ, ಕಾರ್ಯಕ್ರಮವನ್ನು ಸಂಘದ ವೇದಿಕೆಯ ಬದಲಿಗೆ, ಹೆಚ್ಚು ಕನ್ನಡದವರೇ ಇರುವಲ್ಲಿ ಆಯೋಜಿಸಿದ ಈ ಕಾರ್ಯಕ್ರಮ ಸಕಾಲಿಕವಾಗಿದೆ. ಕನ್ನಡಿಗರೇ ವಾಸವಿರುವ ಇಲ್ಲಿ ಕನ್ನಡ ಕಲಿಕಾ ಕೇಂದ್ರದ ಮೂಲಕ ಇಲ್ಲಿನ ಮಕ್ಕಳಿಗೆ ಕನ್ನಡ ಕಲಿಸುವ ಅಗತ್ಯವಿದೆ. ಸಾಮಾಜಿಕ ಹಿತದ ಕಾರ್ಯಕ್ಕೆ ಕಟಿಬದ್ಧರಾಗಬೇಕು. ಬಡವರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು. ತಮಗೆ ಪ್ರಶಸ್ತಿ ನೀಡಿ ಗೌರವಿಸಿದ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಗೆ ಧನ್ಯವಾದಗಳನ್ನು ತಿಳಿಸಿದರು.

ಸದ್ಭಾವನಾ ದಿವಸದ ಪ್ರತಿಜ್ಞೆಯನ್ನು ಗೃಹ ಮಂತ್ರಾಲಯದ ಹಿರಿಯ ಅಧಿಕಾರಿ ಡಾ. ಮಂಜುನಾಥ ಗೋಶಾಲ್ ಅವರು ಎಲ್ಲರಿಗೂ ಬೋಧಿಸಿದರು. ಆಶ್ರಮದ ಕನ್ನಡಿಗರು ತಮ್ಮ ಬೇಡಿಕೆಯ ಅರ್ಜಿಯನ್ನು ಸಂಘದ ಅಧ್ಯಕ್ಷರಿಗೆ ಹಾಗೂ ಕೇಂದ್ರ ಸಚಿವರ ಕಾರ್ಯದರ್ಶಿ ಅವರಿಗೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಚಾಲಕ ಆನಂದ ಮುರಗೋಡ, ಡಾ. ಮಂಜುನಾಥ ಗೋಶಾಲ್, ದೆಹಲಿ ಕರ್ನಾಟಕ ಸಂಘದ ಸದಸ್ಯರಾದ ಎನ್.ಪಿ. ಚಂದ್ರಶೇಖರ್, ಸಂತೋಷ ಜೆ, ಕೆ.ಎಸ್. ಮೂರ್ತಿ, ಪ್ರಭಾಕರ ಮಡ್ಡಿತೋಟ ಹಾಗೂ ಸಿದ್ದಪ್ಪ ಅವರಿಗೆ ಸತ್ಕರಿಸಿ, ಗೌರವ ಸನ್ಮಾನ ನೀಡಲಾಯಿತು. ಶ್ರೀಮತಿ ಸುಮಿತಾ ಮುರಗೋಡ ಅವರು ವಂದಿಸಿದರು. ಆಶ್ರಮದ ಅನೇಕ ಹಿರಿಯರು, ತರುಣರು, ಪುಟಾಣಿ ಮಕ್ಕಳು ಮಹಿಳೆಯರು ಸೇರಿದಂತೆ ನೂರಾರು ಜನ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಂತ್ಯದಲ್ಲಿ ದೆಹಲಿ ಕರ್ನಾಟಕ ಸಂಘದ ವತಿಯಿಂದ ಮಹಾಪ್ರಸಾದ ವಿತರಣೆ ಮಾಡಲಾಯಿತು.

**ವೈಜನಾಥ ವಿ ಬಿರಾದಾರ**
ಕಾರ್ಯದರ್ಶಿ, ಸಾ.ಸು.ಪ್ರ.ಸಂಸ್ಥೆ
ನವದೆಹಲಿ




ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ ದಿನಾಂಕ 15.09.2022 ರಂದು ಆಯೋಜಿಸಿದ ಸರ್. ಎಂ. ವಿಶ್ವೇಶ್ವರಯ್ಯ ಜನ್ಮ ದಿನಾಚರಣೆಯಂದು ಕನ್ನಡ ಪದ್ಯ ಹಾಗೂ ಹಾಡುಗಳನ್ನು ಪ್ರಸ್ತುತಪಡಿಸಿದ ದೆಹಲಿ ಕನ್ನಡಿಗರ ಮಕ್ಕಳು

Delhi Karnataka Sangha Abhimata
Oct-2022, Vol. No.33, Issue No. 1, Price Rs.1/-
RNI Regn. No. 53405/91, DL-SW-01/4016/22-24
Date of Publication : Oct 8th / 9th, Posting Date : 10th / 11th, Total Pages-20, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P







